ಉಪಾಧ್ಯಕ್ಷರು.—ಸ್ವಲ್ಪ ಕಾಲಾವಕಾಶ ಬೇಕು, I must also study and apply my mind.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ನಾನು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ಅವರು ಏನು ಹೇಳಿದರು ಇವರು ಏನು ಹೇಳಿದರು ಅಂತ ಹೇಳಿ ಮೆರಿಟ್‌ಗೆ ಹೋಗುವುದಿಲ್ಲ. ಈ ರೀತಿ ಶ್ರೀಮಾನ್ ನಂಜೇಗೌಡರು ಹೇಳಿರತಕ್ಕ ಪ್ರಕರಣ ನಡೆದಿದ್ದರೆ ಅದು ಖಂಡಿತವಾಗಿಯೂ ಈ ಸಭೆಯ ಮಾನ್ಯ ಸದಸ್ಯರ ಹಕ್ಕಿಗೆ ಲೋಪ ಬರತಕ್ಕ ಪ್ರಕರಣ, ಇದು ವಿಚಾರಾರ್ಹವಾಗಿದೆ. ಸಭೆಯುವರೇ ಇದನ್ನು ತೀರ್ಮಾನ ಮಾಡಬಹುದು ಅಥವಾ ಸಮಿತಿಗೆ ಬೇಕಾದರೂ ಒಪ್ಪಿಸಬಹುದು ಅಥವಾ ತಾವು ರೂಲ್ 82ರ ಪ್ರಕಾರ

> "Notwithstanding anything contained in these rules, the Speaker may refer any question of privilege to the Committee of Privileges for examination, investigation or report."

ಅಂತ ಅನ್ನುವುದಾದರೆ ಆ ರೀತಿಯಾದರೂ ಮಾಡಬಹುದು. ತಾವು ಪುನಃ ವಿಚಾರ ಮಾಡುತ್ತೇನೆ ಎನ್ನುವುದಾದರೆ ಮಾನ್ಯ ಸ್ನೇಹಿತರ ಭಯ ಏನೆಂದರೆ It is not in order so it is rejected ಅಂತ ಆಯಿತು ಅಂದರೆ ತೊಂದರೆಯಾಗುತ್ತದೆ ಎಂದು ಹೇಳಿ ಮೇಲಿಂದ ಮೇಲೆ ಅನೇಕ ಸದಸ್ಯರು ತಮಗೆ ಮನವಿ ಮಾಡಿಕೊಂಡಿದ್ದರೆ ಇದು ಗಹನವಾದ ವಿಷಯ ಎಂದು. ಇಷ್ಟನ್ನು ನಾನು ಹೇಳುತ್ತೇನೆ. ತಾವು ಒಪ್ಪುವುದಾದರೆ ಈ ಪ್ರಶ್ನೆಯನ್ನು ಸಭೆ ಮತ್ತೊಂದು ಸಾರಿ ಚರ್ಚೆ ಮಾಡಬಹುದು. ಕೊನೆಯದಾಗಿ ಶ್ರೀಮಾನ್ ಲಕ್ಕಪ್ಪಗೌಡರು ಈಗ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಏನು ಎಕ್ಸ್‌ಪ್ಲನೇಷನ್ ಕೊಡುವುದಕ್ಕೂ ಅವಕಾಶವಿಲ್ಲ. ಪ್ರತ್ಯೇಕವಾಗಿ ಕರೆದು ಭಾಷಣ ಮಾಡಿ ಎಂದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ, ಅಧ್ಯಕ್ಷರಿಗೆ ಹಕ್ಕು ಇದೆ.

ಶ್ರೀ ಕೆ. ಲಕ್ಕಪ್ಪ.—ಅವರು ಹೇಳಿರುವುದು ನಿಜವೇ ಅಲ್ಲವೇ ಎಂಬುದನ್ನು ತಿಳಿಯಬೇಕು.

ಶ್ರೀ ಎಸ್. ಗೋಪಾಲಗೌಡ.—ನಾನು ಆ ವಿಚಾರಕ್ಕೆ ಹೋಗುತ್ತಿಲ್ಲ. ಯಾರಾದರೂ ಅಲಿಗೇಷನ್ ಮಾಡಿದರೆ ಅದು ಸರಿಯಲ್ಲ, ಅದಕ್ಕೂ ನನಗೂ ಸಂಬಂಧವಿಲ್ಲ. ಎಂದು ಹೇಳುವುದಕ್ಕೆ ಪ್ರತಿಯೊಬ್ಬರಿಗೂ ಹಕ್ಕಿದೆ. ಅಷ್ಟಾದರೂ ಹೇಳಿ.

ಶ್ರೀ ಕೆ. ಲಕ್ಕಪ್ಪ.—ನಿಜಾಂಶವನ್ನು ತಿಳಿಯದೆ ಯಾರೋ ಹೇಳಿದ ಮಾತನ್ನು ಕೇಳಿಕೊಂಡು ಇಷ್ಟು ಹೇಳುತ್ತಿದ್ದಾರೆ ಎಂಬುದನ್ನು ನಾನು ಸಭೆಯ ಗಮನಕ್ಕೆ ತರುತ್ತೇನೆ.

MOTION *Re*: SCARCITY CONDITIONS PREVAILING IN CERTAIN AREAS IN THE STATE

(Debate Contd.)

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಮಾನ್ಯ ಮುಖ್ಯ ಸಚಿವರು ಈ ಸಭೆಯ ಮುಂದೆ ದೇಶದಲ್ಲಿರುವ ಬರಗಾಲ ಪರಿಸ್ಥಿಯನ್ನು ವಿವರಣೆ ಮಾಡಿ ಒಂದು ದೀರ್ಘವಾದ ಹೇಳಿಕೆಯನ್ನು ನಿನ್ನೆ ದಿವಸ ಕೊಟ್ಟಿದ್ದಾರೆ. ಈ ದಿವಸ ನಮ್ಮ ದೇಶದಲ್ಲ ಮುಕ್ಕಾಲು ಭಾಗದಲ್ಲಿ ಬರಗಾಲ ಮತ್ತು ಕ್ಷಾಮ ಪ್ರಾಪ್ತವಾಗಿದೆ. 1965 ರಿಂದ ಮೂರು ವರ್ಷಗಳಿಂದ ಮಳೆ ಬೆಳೆ ಹೋಗಿ ಜನ ಬೇಸತ್ತಿದ್ದಾರೆ. ನಾಲ್ಕನೆಯ ವರ್ಷದಲ್ಲಿ ಮಳೆ ಬರಬಹುದು ಎಂದು ನಿರೀಕ್ಷೆಮಾಡಿ ನಿರಾಶೆಯಾಗಿ ಆಗಸ್ಟ್ ತಿಂಗಳು ಕಳೆದು ಇಂದು ಸೆಪ್ಟಂಬರಿನಲ್ಲಿದ್ದೇವೆ. ಮಳೆ ಬಾರದೆ ಇಡೀ ದೇಶದಲ್ಲಿ ಮಳೆ ಹೋಗಿ ಕೆರೆಗಳು ಒಣಗಿ ಕುಡಿಯಲು ನೀರಿಲ್ಲದೆ ಬೆಂಕಿಯ ಜ್ವಾಲೆಯು ಎದ್ದು ಕ್ಷಾಮ ಪರಿಸ್ಥಿತಿ ತಲೆದೋರಿದೆ. 3 ವರ್ಷದಿಂದ ಕ್ಷಾಮ ಪರಿಸ್ಥಿತಿ ಇದ್ದು ನಾಲ್ಕನೆಯ ವರ್ಷದಲ್ಲೂ ಅದು ಮುಂದುವರೆಯುತ್ತಿರುವುದರಿಂದ ಈಗಲಾದರೂ ಕ್ಷಾಮವಿದೆಯೆಂದು ಮುಖ್ಯಮಂತ್ರಿಗಳು ಸಾರಬೇಕು ಎಂದು ಸರಕಾರಕ್ಕೆ ನಾನು ಸೂಚಿಸುತ್ತಿದ್ದೇನೆ. ಹಾಗೆ ಮಾಡಿದಮೇಲೆ ಕ್ಷಾಮಕ್ಕೆ ಸಂಬಂಧಪಟ್ಟ ಕಾನೂನಿನ ಪ್ರಕಾರ ಅತಿ ಜರೂರಾಗಿ ಏನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ದೇಶದಲ್ಲಿ ಕೈಗೊಳ್ಳಬೇಕು, ಈಗಲೇ ಒಂದು ಫ್ಯಾಮಿನ್ ಕಮಿಷನ್ ರಚಿಸಬೇಕು, ಒಬ್ಬ ಕಮೀಷನರನ್ನು ನೇಮಕಮಾಡಬೇಕು, ಹಾಗೆ ಮಾಡಿ ಅತಿ ಜರೂರಾಗಿ, ಅತಿ ಶೀಘ್ರವಾಗಿ ಬೇಕಾದ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಲು ಏರ್ಪಾಡು ಮಾಡಬೇಕು ಎಂದು ಸರಕಾರಕ್ಕೆ ಈ ಸಂದರ್ಭದಲ್ಲಿ ಸೂಚಿಸುತ್ತಿದ್ದೇನೆ.

ಈಗ ಮುಖ್ಯಮಂತ್ರಿಗಳು ಕೊಟ್ಟಿರುವ ಹೇಳಿಕೆಯ ಪ್ರಕಾರ ಈ ಮೈಸೂರು ದೇಶದಲ್ಲಿ ಸುಮಾರು 174 ತಾಲ್ಲೂಕುಗಳಲ್ಲಿ 100 ತಾಲ್ಲೂಕುಗಳಲ್ಲಿ ಮಳೆಯಿಲ್ಲ, ಬೆಳೆಯಿಲ್ಲ; ಕಳೆದ 3 ವರ್ಷ ವರ್ಷಗಳಿಂದ ರೈತರು, ಜನರು ತಮ್ಮ ಮನೆಯಲ್ಲಿದ್ದ ದವಸಧಾನ್ಯ ಮುಂತಾದ್ದನ್ನೆಲ್ಲಾ ಮಾರಿದ್ದಾರೆ ದನಕರುಗಳನ್ನು ಮಾರಿದ್ದಾರೆ, ಹೆಂಡತಿಯ ಒಡವೆಗಳನ್ನು ಮಾರಾಟಮಾಡಿದ್ದಾರೆ. ಹೋದ ವರ್ಷ ಕ್ಷಾಮವಿದ್ದಾಗ ಅನೇಕ ಹಳ್ಳಿಗಳಲ್ಲಿ ಒಂದು ಹೊತ್ತು ಊಟಮಾಡುವುದಕ್ಕೂ ಶಕ್ತಿ ಇಲ್ಲದೆ ಎಲ್ಲೂ ಸಾಲವೂ ಸಿಕ್ಕದೆ ಹೆಂಡತಿಯ ಮಾಂಗಲ್ಯವನ್ನು ಸಹ ಮಾರಿದ್ದಾರೆ. ಇದನ್ನು ಮರೆತಿಲ್ಲ. ಇಂಥ ದಾರುಣ ಪರಿಸ್ಥಿತಿ ಅನೇಕ ಕಡೆ ಇದೆ. ಇನ್ನುಮುಂದೆ ಏನಾಗುತ್ತದೋ ಈಗಲೇ ಹೇಳುವಂತಿಲ್ಲ. ಇನ್ನುಳಿದಿರುವುದು ಮಕ್ಕಳನ್ನು ಮಾರಬೇಕಾದದ್ದು. ಆದರೆ ಅವರನ್ನು ಕೊಳ್ಳುವ ಜನರಿಲ್ಲ. ದನಗಳನ್ನು ಮಾರಲು ಹೋದರೆ ಅವುಗಳಿಗೆ ಮೇವು ಮತ್ತು ನೀರು ದೊರೆಯುವುದು ಕಷ್ಟವಾಗಿರುವುದರಿಂದ ಅವುಗಳನ್ನೂ ಸಹ ಕೊಳ್ಳುವವರಿಲ್ಲ. ಇಂಥ ಭಯಂಕರ ಪರಿಸ್ಥಿತಿಯಿದೆ. ಆದುದರಿಂದ ಇದನ್ನು ಸರಕಾರ ವಿಚಾರಮಾಡಿ ಈ ಘೋರ ಪರಿಸ್ಥಿತಿಯನ್ನೆದುರಿಸಲು ತಕ್ಕ ಕಾರ್ಯಕ್ರಮವನ್ನು ಅತಿ ಶೀಘ್ರವಾಗಿ ತೆಗೆದುಕೊಳ್ಳಬೇಕು. ಯುದ್ಧದ ಸಮಯದಲ್ಲಿ ಮಾಡುವ ಏರ್ಪಾಡನ್ನು ಕೂಡಲೆ ಮಾಡಬೇಕು. ಮೈಸೂರು ಡಿವಿಜನ್ನಿಗೆ 6 ಜಿಲ್ಲೆಗಳು ಸೇರುತ್ತವೆ, ಆ ಡಿವಿಜನ್ನಿನಲ್ಲಿ ಸಹಸ್ರ ಹಳ್ಳಿಗಳಿವೆ. ಅಲ್ಲಿ ಘೋರ ಪರಿಸ್ಥಿತಿ ಇರುವಾಗ ಆ ಡಿವಿಜನ್ನಿನಲ್ಲಿ ಮುಖ್ಯಮಂತ್ರಿಗಳ ಹೇಳಿಕೆಯಂತೆ 760 ಕೆಲಸಗಳನ್ನು ಮಾತ್ರ ಪ್ರಾರಂಭಿಸಿದ್ದಾರೆ. ಇಂಥ ಪರಿಸ್ಥಿತಿ ಬಂದಾಗ ಮನುಷ್ಯನಿಗೆ ಮುಖ್ಯವಾಗಿ ಬೇಕಾಗಿರುವುದು ಕೆಲಸ. ಇಂದು ಅವನ ಕೈಯಲ್ಲಿ ಹಣವಿಲ್ಲ; ಹಣ ಕೊಟ್ಟು ಆಹಾರವನ್ನು ತೆಗೆದುಕೊಳ್ಳುವ ಶಕ್ತಿಯಿಲ್ಲ. ಇಂದು ಮುಖ್ಯವಾಗಿ ಅವನಲ್ಲಿ ಆಹಾರವನ್ನು ಕೊಳ್ಳುವ ಶಕ್ತಿಯನ್ನು ಉತ್ಪತ್ತಿ ಮಾಡುವುದು ಸರಕಾರದ ಮುಖ್ಯ ಕೆಲಸವಾಗಿದೆ. ಸರಕಾರದ ಲೆಕ್ಕದ ಪ್ರಕಾರ ಜೂನ್ ತಿಂಗಳಿನಲ್ಲಿ ಮೈಸೂರು ದೇಶದಲ್ಲಿ ಕೆಲಸ ಬೇಕೆಂದು ಕೇಳುತ್ತಿದ್ದವರು ಸುಮಾರು ಇಪ್ಪತ್ತೊಂದುವರೆ ಲಕ್ಷ ಮಂದಿ. ಅದರಲ್ಲಿ ಕೇವಲ ಒಂದು ಲಕ್ಷ ಮಂದಿಗೆ ಸರಕಾರ ಕೆಲಸ ಒದಗಿಸಿದೆ. ಆದ್ದರಿಂದ ಸುಮಾರು 20 ಲಕ್ಷ ಜನರಿಗೆ ಕೆಲಸವಿಲ್ಲ. ಬಹುಶಃ ನನ್ನ ಲೆಕ್ಕದ ಪ್ರಕಾರ ಇಂದು 100 ತಾಲ್ಲೂಕುಗಳಲ್ಲಿ ಸುಮಾರು ಒಂದೂವರೆ ಕೋಟಿ ಜನರು ಕ್ಷಾಮದಿಂದ ನರಳುತ್ತಿದ್ದಾರೆ. ಅವರಲ್ಲಿ ಒಂದು ಕೋಟಿಯನ್ನು ಬಿಟ್ಟರೂ ಉಳಿದವರಿಗೆ ಆಹಾರವನ್ನು ಒದಗಿಸುವ ಶಕ್ತಿ ಇರಬೇಕು. ಆದರೂ ಕೂಡ 50 ಲಕ್ಷ ಜನರು ಇಂದು ದಾರಿದ್ರ್ಯದಲ್ಲಿ ಮುಳುಗಿ ಅನ್ನವಿಲ್ಲದೆ ಕೆಲಸವಿಲ್ಲದೆ ನಿರ್ಗತಿಕರಾಗಿದ್ದಾರೆ. ಹಾಗಿರುವಾಗ ಸರಕಾರದವರು ನಿಜವಾಗಿಯೂ ಕೂಡ ಕ್ಷಾಮ ಪರಿಸ್ಥಿತಿಯನ್ನೆದುರಿಸಿ ಕೊನೆಯ ಪಕ್ಷ 50 ಲಕ್ಷ ಜನರಿಗಾದರೂ ಸರಕಾರದಿಂದ ಕೆಲಸ ಕೊಟ್ಟು ಆಹಾರವನ್ನೊದಗಿಸಬೇಕಾದ್ದು ಅವರ ಪ್ರಥಮ ಕರ್ತವ್ಯವಾಗಿದೆ. ಒಬ್ಬನಿಗೆ ಒಂದು ರೂಪಾಯಿನಂತೆ ದಿನಕ್ಕೆ 50 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಸ್ವಲ್ಪ ಮಟ್ಟಿಗಾದರೂ ಕ್ಷಾಮ ಪರಿಸ್ಥಿತಿಯನ್ನೆದುರಿಸಲು ಕಾರ್ಯವನ್ನು ಮಾಡುತ್ತಿದ್ದಾರೆಂದು ನೆಮ್ಮದಿಯಿಂದಿರಬಹುದು. ಹಾಗಿಲ್ಲದೆ ಕೇವಲ ಒಂದು ಡಿವಿಜನ್ನಿಗೆ 10-15 ಲಕ್ಷ ಕೊಟ್ಟರೆ ಅದು ಸಮುದ್ರದಲ್ಲಿ ಒಂದು ತೊಟ್ಟು ನೀರು ಹಾಕಿದಂತಾಗಿ ನಿಜವಾಗಿಯೂ ಕ್ಷಾಮ ಪರಿಹಾರವಾಗುವುದಿಲ್ಲ. ಎಂದು ತೋರುತ್ತದೆ. ಸರಕಾರ ಕೆಲಸ ನೀಡಿ ಕೂಲಿಗಾಗಿ ಹಣ ಕೊಡುವುದು ಬೇಡ, ಆಹಾರ ಕೊಡಬೇಕು. ಎರಡು ಹೊತ್ತು ಊಟವನ್ನು ಕೊಡುವುದಕ್ಕಾಗದಿದ್ದರೂ ಒಂದು ಹೊತ್ತಾದರೂ ಕೊಟ್ಟು ಕಾಪಾಡಿದರೆ ಜನರು ಬದುಕುತ್ತಾರೆ. ಇಲ್ಲದಿದ್ದರೆ ಜನರು ಸಾಯುವ ಸ್ಥಿತಿ ಬರುತ್ತದೆ. ದಿನಕ್ಕೆ 50 ಲಕ್ಷ ರೂಪಾಯಿ ಎಲ್ಲಿಂದ ತರಬೇಕು ಎಂದು ಸರಕಾರ ಕೇಳಬಹುದು. ಆದರೆ ಜನರು ಬದುಕಿರಬೇಕಾದರೆ ಹೇಗಾದರೂ ಮಾಡಿ ಅಷ್ಟನ್ನು ಒದಗಿಸಲೇಬೇಕು. ಇತರ ಕಾರ್ಯಗಳನ್ನಾದರೂ ಬದಿಗಿಟ್ಟು ಈ ಪರಿಸ್ಥಿತಿಯನ್ನೆದುರಿಸುವುದಕ್ಕೆ ಸಿದ್ಧವಾಗಬೇಕು ಎಂದು ಸರಕಾರಕ್ಕೆ ಸೂಚನೆಯನ್ನು ನಾನು ಅತಿ ಆಗ್ರಹದಿಂದ ಮಾಡುತ್ತೇನೆ.

ಕ್ಷಾಮ ನಿವಾರಣೆಗಾಗಿ ಇಷ್ಟೊಂದು ಹಣವನ್ನು ಖರ್ಚು ಮಾಡುವಾಗ ಯಾವ ರೀತಿಯಲ್ಲಿ ಮಾಡಬೇಕು ಎನ್ನುವುದು ಕೂಡ ಬಹಳ ಪ್ರಾಮುಖ್ಯವಾದ ಪ್ರಶ್ನೆ. ಅನೇಕ ಜನ ಮಿತ್ರರು ಹೇಳಿದ್ದಾರೆ, ಕ್ಷಾಮ ಪರಿಸ್ಥಿತಿಯನ್ನು ಎದುರಿಸಲು, ನಿಮ್ಮಲ್ಲಿರುವ ಏಜೆನ್ಸಿಯಿಂದ ಹಣ ಖರ್ಚು ಮಾಡತಕ್ಕ ಮತ್ತು ಯಾವ ರೀತಿ ಖರ್ಚು ಮಾಡಬೇಕೆಂಬ ಶಕ್ತಿ ಇವೊತ್ತು ನಮ್ಮ ದೇಶದಲ್ಲಿದೆಯೋ, ನಮ್ಮ ದೇಶದಲ್ಲಿ ಆ ಸಾಧನೆ ಇದೆಯೋ ಎಂದು ಕೇಳಬೇಕಾಗಿದೆ. ಮುಖ್ಯ ಸಚಿವರು ಒಂದು ಅಂಶವನ್ನು ಒಪ್ಪಿಕೊಂಡಿದ್ದಾರೆ.

"I have also heard that some middlemen are coming to appear in order to make illegitimate profit out of these works."

(ಶ್ರೀ ಎಸ್. ಶಿವಪ್ಪ)

ಇದರಲ್ಲಿ ಅವರು ಬಹಳ ಅರ್ಥಗರ್ಭಿತವಾಗಿ ಒಪ್ಪಿಕೊಂಡಿದ್ದಾರೆ. ಈ ದೇಶದಲ್ಲಿ ಕ್ಷಾಮ ಬರಲಿ, ಯಾವುದೇ ಬರಲಿ, ಈ ಮಧ್ಯವರ್ತಿ ಜನ ತಮ್ಮ ಸ್ವಾರ್ಥಕ್ಕಾಗಿ ಹಣವನ್ನು ದುರುಪಯೋಗ ಮಾಡತಕ್ಕ ಒಂದು ವರ್ಗ ಈ ದೇಶದಲ್ಲಿ ಬೆಳೆದುಕೊಂಡು ಬಂದಿದೆ. ಕ್ಷಾಮದ ಹೆಸರಿನಲ್ಲಿ ಕೂಡ ಮನುಷ್ಯನ ಹಸಿವನ್ನು ವ್ಯಾಪಾರ ಮಾಡಿ ಜೀವನ ಮಾಡತಕ್ಕ ಸ್ವಾರ್ಥಿಗಳ ಗುಂಪು ಈ ದೇಶದಲ್ಲಿದೆ. ಹಣವನ್ನು ಖರ್ಚು ಮಾಡುವುದರಲ್ಲಿ ರೆಡ್‌ಟೇಪಿಸಂ ಇದೆ ಎನ್ನುವುದನ್ನು ಅವರು ಒಪ್ಪಿಕೊಂಡಿದ್ದಾರೆ. ನಾನು ಇನ್ನೂ ಮುಂದೆ ಹೋಗುತ್ತೇನೆ ಅಧಿಕಾರಿಗಳ ದಿನಚರಿ ಕೆಲಸಗಳಲ್ಲಿ ಅಡ್ಡಿಯಾಗಿರತಕ್ಕ ಒಂದು ಗುಂಪು ಈ ದೇಶದಲ್ಲಿದೆ, ಅದು ನಿಮ್ಮ ಕಾಂಗ್ರೆಸ್ಸಿನ ಜನ. ಯಾವ ಅಧಿಕಾರಿಯೇ ಆಗಲೀ ಕೆಲಸವನ್ನು ಸರಾಗವಾಗಿ, ನೇರವಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಮಧ್ಯವರ್ತಿಗಳಾಗಿ ಕೆಲವು ಜನ ನಿಂತಿದ್ದಾರೆ. ಆದ್ದರಿಂದ ನಾವು ಅಧಿಕಾರಿಗಳನ್ನು ಶಪಿಸಿ ಪ್ರಯೋಜನವಿಲ್ಲ. ಈ ದೇಶದಲ್ಲಿ ಕೆಲಸ ನಿಷ್ಪಕ್ಷಪಾತವಾಗಿ, ಶೀಘ್ರವಾಗಿ ಆಗಬೇಕು ಎಂದರೆ ನೀವು ನಿಮ್ಮ ವರ್ಗದ ಜನಗಳಿಗೆ ಹೇಳಬೇಕು, ದಿನಚರಿಯ ಕೆಲಸಕಾರ್ಯಗಳಲ್ಲಿ ಕೈ ಹಾಕಬೇಡಿ ಎಂದು. ಇಂಥ ಸೂಚನೆಯನ್ನು ಮೊದಲು ಕೊಡಬೇಕೆಂದು ನಾನು ಮುಖ್ಯ ಸಚಿವರಿಗೆ ಸೂಚನೆ ಕೊಡುತ್ತಿದ್ದೇನೆ.

ನನಗೆ ಒಂದು ಕಾಗದ ಬಂದಿದೆ. ಇಂಥ ಎಷ್ಟೋ ಕಾಗದಗಳು ಬರುತ್ತಿವೆ, ಕ್ಷಾಮ ಪರಿಹಾರ ಕಾರ್ಯಗಳ ಸಂಬಂಧದಲ್ಲಿ ಕೆಲವು ಮಂತ್ರಿಗಳು ಅವರವರ ಕ್ಷೇತ್ರಗಳಿಗೆ ಹೋಗಿ ಅಲ್ಲಿಯ ತಾಲ್ಲೂಕು ಬೋರ್ಡ್ ಅಧ್ಯಕ್ಷರ ಜೊತೆಗೆ ಮಾತನಾಡಿ, ತಾಲ್ಲೂಕು ಬೋರ್ಡ್ ಚುನಾವಣೆಗಳು ಬರುತ್ತವೆ, ಕಾಂಗ್ರೆಸ್ ಪಕ್ಷದವರಿಗೋಸ್ಕರ ನಾವು ಕೊಡುವ ಕ್ಷಾಮ ಪರಿಹಾರ ಕಾರ್ಯಗಳ ಹಣವನ್ನು ಉಪಯೋಗಿಸಿಕೊಳ್ಳಿ ಎಂದು ಪ್ರಚಾರ ಮಾಡುತ್ತಿದ್ದಾರೆಂದು, ದಯವಿಟ್ಟು ತಾಲ್ಲೂಕು ಬೋರ್ಡನ್ನು ರದ್ದುಮಾಡಿ ಈ ಕೆಲಸವನ್ನು, ಯಾವುದಾದರೂ ಒಬ್ಬ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿ ಅವರ ಮೂಲಕ ಮಾಡಿಸಿ ಎಂದು ನೊಂದು ಬರೆದಿದ್ದಾರೆ. ಇದು ಒಬ್ಬರಿಂದ ಬಂದಿರುವ ಕಾಗದವಲ್ಲ. ಇದು ಅಕ್ಷರಶಃ ನಿಜ. ಯಾವ ತಾಲ್ಲೂಕಿಗೇ ಹೋಗಿ, ಯಾವ ಹಳ್ಳಿಗೇ ಹೋಗಿ, ಇವೊತ್ತು ನಡೆಯುತ್ತಿರುವ ಕೆಲಸ ನಿಮ್ಮ ಮನಸ್ಸಿನಲ್ಲಿರುವ ಕೆಲಸ. ದೇಶವೆಂದರೆ ಕೇವಲ ಕಾಂಗ್ರೆಸ್ಸಿನ ಕೆಲಸ ಎಂದು ನಿಮ್ಮ ಮಂತ್ರಿಗಳ ತಲೆಯಲ್ಲಿ ಅಡಗಿದೆ. ಅವರ ತಲೆಯಲ್ಲಿ ಅಡಗಿರುವ ಈ ಮನೋಭಾವ ಏನಿದೆ, ಅದರಿಂದ ದೇಶಕ್ಕೆ ಉಪಯೋಗವಾಗುವುದಿಲ್ಲ. ಒಂದು ದಿನಕ್ಕೆ 50 ಲಕ್ಷವಲ್ಲ ಒಂದು ಕೋಟಿ ರೂಪಾಯಿ ಖರ್ಚು ಮಾಡಿದರೂ ದೇಶದಲ್ಲಿರುವ ಕ್ಷಾಮ ನಿವಾರಣೆ ಯಾಗುವುದಿಲ್ಲ ಎಂದು ಹೇಳಬಯಸುತ್ತೇನೆ. ಕ್ಷಾಮದ ಹೆಸರಿನಲ್ಲಿ ಖರ್ಚು ಮಾಡಲು ಏನು ಬೇಡಿಕೆಯನ್ನಿಟ್ಟು ಈ ಸಭೆಯ ಮಂಜೂರಾತಿ ಪಡೆಯುತ್ತೀರಿ ಆ ಹಣ ಈ ದೇಶದಲ್ಲಿ ಹೆಚ್ಚು ಅನುಕೂಲವಿಲ್ಲದೆ ಇರತಕ್ಕ ಬಡ ರೈತನಿಗೆ, ಬಡ ಕಾರ್ಮಿಕನಿಗೆ ಹೋದರೆ ಸಂತೋಷವೇ ಹೊರತು, ಅದಿಲ್ಲದೆ ಮಧ್ಯವರ್ತಿ ಜನಗಳಿಗೆ ಹೋದರೆ ನಾವು ಹಣವನ್ನು ಮಂಜೂರು ಮಾಡಿಯೂ ಏನೂ ಉಪಯೋಗವಿಲ್ಲ. ಈಗತಾನೇ ಮಾನ್ಯ ಸದಸ್ಯರೊಬ್ಬರು, ಹೇಳಿದರು, ಕಾಂಗ್ರೆಸ್ಸಿನ ಮಂತ್ರಿಗಳು ಯಾವ ರೀತಿಯಾಗಿ ಮಾಡುತ್ತಿದ್ದಾರೆ ಎಂದು. ಮಾನ್ಯ ಮಂತ್ರಿಗಳಾದ ವಿಠಲದಾಸ ಶೆಟ್ಟಿಯವರು ನಗುತ್ತಿದ್ದಾರೆ. ಇದು ನಗುವ ಮಾತಲ್ಲ. ಯಾರೇ ಆಗಲೀ, ಈ ದೇಶದಲ್ಲಿ ಮಂತ್ರಿಗಳಾದ ಮೇಲೆ ದೇಶಕ್ಕೆ ಮಂತ್ರಿಗಳೇ ಹೊರತು ಕಾಂಗ್ರೆಸ್ಸಿನ ಮಂತ್ರಿಗಳಲ್ಲ. ನೀವು ಕಾಂಗ್ರೆಸ್ಸಿನವರಾಗಿ ವರ್ತನೆ ಮಾಡಿದರೆ ಅದಕ್ಕಿಂತ ದೊಡ್ಡ ಪಾಪದ ಕೆಲಸ ಮತ್ತೊಂದಿಲ್ಲ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಿ. ಬಾಸ್ಕರ ಶೆಟ್ಟಿ (ಕಾಪು).—ಅವರ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿ ವೃಷ್ಟಿಯಾಗಿದೆ.

ಶ್ರೀ ಎಸ್. ಶಿವಪ್ಪ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿವೃಷ್ಟಿಯಾಗಿದೆ ಎಂದು ನನ್ನ ಮಾನ್ಯ ಸ್ನೇಹಿತರು ಹೇಳುತ್ತಿದ್ದಾರೆ. ಅಲ್ಲಿ ಮಳೆಯಾದರೆ, ಅಲ್ಲಿ ಬೆಳೆಯುವ ಅಕ್ಕಿಯನ್ನು ನಮಗೆ ಕಳಿಸಿದರೆ ಬಹಳ ಸಂತೋಷವಾಗುತ್ತದೆ.

ಈಗ ಇರುವ ಫ್ಯಾಮಿನ್ ಕೋಡ್ ಏನಿದೆ ಅದು ಬಹಳ ಹಿಂದೆ ಆಗಿರತಕ್ಕದ್ದು. ಅದರ ಪ್ರಕಾರವಾಗಿ ಕ್ಷಾಮ ನಿರ್ಧಾರ ಮಾಡುವುದು ಎಂದರೆ ಎಲ್ಲೂ ಕೂಡ ಈ ಪ್ರಪಂಚದಲ್ಲಿ ಕ್ಷಾಮ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅದರಲ್ಲಿ ಕ್ಷಾಮ ಬಂದ ಮೇಲೆ ಏನು ಮಾಡಬೇಕು ಎನ್ನುವುದನ್ನು ಬಹಳ ಚೆನ್ನಾಗಿ ಬರೆದಿದ್ದಾರೆ. ಬ್ರಿಟಿಷರ ಕಾಲದಲ್ಲಿ ಅದನ್ನು ಬರೆದದ್ದು. ಈ ದೇಶದಲ್ಲಿರುವ ಜನರನ್ನು ಸಾಕತಕ್ಕ ಜವಾಬ್ದಾರಿ, ಅವರ ಆರೋಗ್ಯವನ್ನು ಕಾಪಾಡತಕ್ಕ ಜವಾಬ್ದಾರಿ ಸರ್ಕಾರದ್ದಾಗಿರಬೇಕು. ಅದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕು ಎಂದು ಅಂದಿನ ಬೇಜವಾಬ್ದಾರಿ ಸರ್ಕಾರ, ಯಾರು ನಮ್ಮ ದೇಶದ ರಕ್ತವನ್ನು ಹರಿಸಿ ಆಳುತ್ತಿದ್ದರು ಅಂಥ

ಇಂಗ್ಲಿಷರು ಬರೆದು ಹೋಗಿದ್ದಾರೆ. ಮೂರು ವರ್ಷ ದುರ್ಭಿಕ್ಷವಾಗಿ ನಾಲ್ಕನೆಯ ವರ್ಷ ದುರ್ಭಿಕ್ಷ ಬಂದಿದೆ. ಈಗಲಾದರೂ ಕೂಡ ರಾಜ್ಯದಲ್ಲಿ ಕ್ಷಾಮವಿದೆ ಎಂದು ಸಾರುವುದಕ್ಕೆ ಹಿಂದುಮುಂದು ನೋಡುತ್ತಿದ್ದೀರಿ. ಒಂದು ವರ್ಷ ಮಳೆ ಬಾರದೆ ಎರಡನೇ ವರ್ಷ ಅಭಾವ ಪರಿಸ್ಥಿತಿ ಬಂದರೆ ಕ್ಷಾಮ ಎಂದು ಸಾರಬೇಕೆಂದು ಹೇಳುವಾಗ ಮೂರು ವರ್ಷಗಳಿಂದ ಬಿದ್ದಿರುವ ಮಳೆಯ ಸರಾಸರಿಯನ್ನು ನೋಡುವಾಗ, ಎಷ್ಟು ಬೆಳೆಯಾಯಿತು ಎಂದು ನೋಡುವಾಗ, ಸಭೆಯ ಮುಂದೆ 1965-66, 1966-67 1967-68, ಈ ಮೂರು ವರ್ಷಗಳ ಅಂಕಿಅಂಶಗಳನ್ನು ಇಟ್ಟಿರುವುದನ್ನು ನೋಡಿದರೆ ಸರಾಸರಿ ಕಾಲು ಭಾಗ ಕೂಡ ಮಳೆಯಾಗಿಲ್ಲ. ಮೂರು ವರ್ಷದಿಂದ ದುರ್ಭಿಕ್ಷ ಇದ್ದು ನಾಲ್ಕನೆಯ ವರ್ಷವೂ ಮಳೆಯಿಲ್ಲದೆ ಘೋರ ಕ್ಷಾಮ ದೇಶಕ್ಕೆ ಬಂದಿರುವುದರಿಂದ ನಾನು ಸರ್ಕಾರಕ್ಕೆ ಹೇಳುತ್ತೇನೆ, ಹಿಂದು ಮುಂದು ನೋಡದೆ ಈ ದೇಶದಲ್ಲಿ ಕ್ಷಾಮ ಬಂದಿದೆ ಎನ್ನುವುದನ್ನು ಸರ್ಕಾರ ಅಧಿಕೃತವಾಗಿ ಸಾರಿ, ಅದಕ್ಕೆ ಬೇಕಾದ ಹಣವನ್ನು ಈ ಸರ್ಕಾರ ಒದಗಿಸುವುದಲ್ಲದೆ ಇನ್ನೂ ಹೆಚ್ಚು ಹಣವನ್ನು ಕೇಂದ್ರ ಸರ್ಕಾರದಿಂದ ಕೂಡ ತರತಕ್ಕ ಸಾಮರ್ಥ್ಯ ಸರ್ಕಾರಕ್ಕೆ ಇರಬೇಕು. ಪ್ಲಾನಿಂಗ್ ಕಮಿಷನ್‌ನವರು ಇಲ್ಲಿಗೆ ಬಂದಿದ್ದಾರೆ. ಅವರು ನಮ್ಮ ಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡುತ್ತಿದ್ದಾರೆ. ಅವರು ಬಂದಿರುವ ಕಾಲದಲ್ಲಿ ನಮ್ಮ ಯೋಜನೆಯ ಕಾರ್ಯಕ್ರಮಗಳೇನು, ನಮ್ಮ ಮುಂದಿನ ಗುರಿ ಏನು ಎನ್ನುವುದನ್ನು ಸಿದ್ಧಮಾಡಿಕೊಳ್ಳಬೇಕಾಗಿತ್ತು. ಸರ್ಕಾರದವರ ಅಂಕಿಗಳ ಆಧಾರದ ಮೇಲೆ ಕೇವಲ 10 ಕೋಟಿ ರೂಪಾಯಿ ಪ್ಲಾನ್ ತಯಾರು ಮಾಡಿದ್ದಾರೆ. ನಾವೇ 10 ಕೋಟಿ ರೂಪಾಯಿ ಕೇಳಿದರೆ ಅವರು ಇನ್ನು ಎಷ್ಟು ಕೊಡಬಹುದು ? ಇವೊತ್ತಿನ ದಿವಸ 60 ಕೋಟಿ ರೂಪಾಯಿಗಳ ಒಂದು ಕಾರ್ಯಕ್ರಮವನ್ನು ಹಾಕಬೇಕಾಗಿತ್ತು. ಹಸಿವಿನಿಂದ ಜನ ಸಾಯುವ ಸ್ಥಿತಿಯಲ್ಲಿರುವಾಗ 60 ಕೋಟಿ ರೂಪಾಯಿ ಕೂಡ ಸಾಕಾಗುವುದಿಲ್ಲ. ಒಂದು ದಿನಕ್ಕೆ 50 ಲಕ್ಷ ರೂಪಾಯಿ ಜನರಿಗೆ ಸಿಕ್ಕಬೇಕಾದರೆ ಆರು ತಿಂಗಳಿಗೆ ಎಷ್ಟಾಗುತ್ತದೆ ಎನ್ನುವುದನ್ನು ಲೆಕ್ಕ ಹಾಕಿ ಪ್ಲಾನಿಂಗ್ ಕಮೀಷನ್ ಮುಂದೆ ಕ್ಷಾಮ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಚರ್ಚೆಗೆ ಸಿದ್ಧಮಾಡಿಕೊಳ್ಳಬೇಕಾಗಿತ್ತು. 10 ಕೋಟಿ ರೂಪಾಯಿಗಳಲ್ಲಿ ಏನು ಸಾಧನೆ ಮಾಡಬಹುದು ಎನ್ನುವುದನ್ನು ಯೋಚನೆ ಮಾಡಿ. ನಿಮ್ಮಲ್ಲಿ ಪೂರ್ವ ಸಿದ್ಧತೆಗಳಿಲ್ಲ ಎನ್ನುವುದನ್ನು ಇದರಿಂದ ಕೂಡ ಅರಿಯಬಹುದಾಗಿದೆ. ನಿಮ್ಮಲ್ಲಿ ಅಂಕಿ ಅಂಶಗಳಿಲ್ಲ. ಎಷ್ಟು ಜನಗಳಿಗೆ ಮನೆಯಿಲ್ಲ, ಎಷ್ಟು ಜನಗಳಿಗೆ ತಿನ್ನುವುದಕ್ಕೆ ಗತಿ ಇಲ್ಲದೆ ನಿರ್ಗತಿಕರಾಗಿದ್ದಾರೆ, ಎನ್ನುವ ಅಂಕಿಅಂಶಗಳನ್ನು ಸಂಗ್ರಹ ಮಾಡಿದ್ದೀರಾ ? ಎಷ್ಟು ಜನ ಹಸಿವಿನಿಂದ ಇದ್ದಾರೆ ಎನ್ನುವುದು ಗೊತ್ತೇ ? ಏನೋ ಒಂದು ಸರಾಸರಿ ಮಲಾಮಿ ಮೇಲೆ ಎಷ್ಟು ಜನ ಇರಬಹುದು ಎಂದು ಹೇಳುತ್ತೀರೇ ಹೊರತು ಖಡಾಖಂಡಿತವಾಗಿ ಇಷ್ಟು ಜನ ಇದ್ದಾರೆ ಎಂದು ಹೇಳುವ ಲೆಕ್ಕ ನಿಮ್ಮಲ್ಲಿದೆಯೋ ? ರೆವೆನ್ಯೂ ಇಲಾಖೆಯ ತಹಸೀಲ್ದಾರರು ರೆವೆನ್ಯೂ ಇನ್‌ಸ್ಪೆಕ್ಟರುಗಳು ಇವರೆಲ್ಲ ಏನು ಮಾಡುತ್ತಾರೆ ? ನಾನು ಹೇಳಿದ ಪ್ರಕಾರ ಅಂಕಿಅಂಶಗಳನ್ನು ಸರ್ಕಾರ ಸಂಗ್ರಹ ಮಾಡಿದ್ದರೆ ಪ್ಲಾನಿಂಗ್ ಕಮಿಷನ್ ಮುಂದೆ ಹೇಳುವುದಕ್ಕೆ ಸುಲಭವಾಗುತ್ತಿತ್ತು. ಅಂಥ ಅಂಕಿಅಂಶಗಳ ಅಭಾವ ಸರ್ಕಾರದಲ್ಲಿದೆ.

ಸಭಾಪತಿಯವರೇ, ಇವೊತ್ತು ನಮ್ಮ ದೇಶದಲ್ಲಿ ಅಭಾವ ಅಥವಾ ಕ್ಷಾಮ ಪರಿಸ್ಥಿತಿಯಿಂದ ಹೊಟ್ಟೆಗೆ ಅನ್ನವಿಲ್ಲದೆ ಜನ ನರಳುತ್ತಿರುವ ಕಾಲದಲ್ಲಿ ಸರ್ಕಾರದ ಮನೋಭಾವವೇನಿರಬೇಕು ? ನಿನ್ನೆಯ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಅಭಾವ ಪರಿಸ್ಥಿತಿಗೆ ಸಂಬಂಧಪಟ್ಟ ಒಂದು ಹೇಳಿಕೆಯನ್ನು ಸಭೆಯ ಮುಂದೆ ಇಟ್ಟರು. ಅದೇ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿ ಮಂತ್ರಿಗಳ ಸಂಬಳ ಸಾರಿಗೆಗೋಸ್ಕರ ಒಂದು ಮಸೂದೆಯನ್ನು ಮಂಡಿಸಿದ್ದಾರೆ. ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿ 5 ಜನ ಸ್ಟೇಟ್ ಮಂತ್ರಿಗಳನ್ನು ತೆಗೆದುಕೊಂಡು ಅವರಿಗೋಸ್ಕರ ಸಂಬಳವನ್ನು ಮಂಜೂರು ಮಾಡತಕ್ಕ ಕಾನೂನನ್ನು ಕೂಡ ಸಭೆಯ ಮುಂದೆ ಇಟ್ಟಿದ್ದಾರೆ. ಹೀಗಾದರೆ ಜನತೆ ನಿಮ್ಮನ್ನು ಹೇಗೆ ನಂಬುತ್ತದೆ ? ಸರ್ಕಾರದಲ್ಲಿ ಮಿತವ್ಯಯವನ್ನು ಮಾಡುವುದರ ಬದಲು, ಹಣವನ್ನು ಉಳಿತಾಯ ಮಾಡುವುದರ ಬದಲು ಹಣವನ್ನು ನಿಮಗಾಗಿ, ನಿಮ್ಮ ಮಂತ್ರಿಗಳಿಗಾಗಿ ಹೆಚ್ಚುವರಿ ಬೇಡಿಕೆ ಮೂಲಕ ಈ ಸಭೆಯ ಮುಂದೆ ಕೇಳತಕ್ಕ ಕಾರ್ಯವನ್ನು ನೋಡಿದರೆ ಅದಕ್ಕಿಂತ ಅಪಹಾಸ್ಯವಾದ ಕ್ರಮ ಮತ್ತೊಂದಿಲ್ಲ ಎಂದು ಹೇಳಬೇಕಾಗಿದೆ.

ವಿರೋಧ ಪಕ್ಷದ ನಾಯಕರಿಗೆ ಮನೆ ಕೊಟ್ಟು, ಸಂಬಳ ಕೊಟ್ಟು ಇನ್ನೂ ಏನೇನೋ ಕೊಟ್ಟು ಅದಕ್ಕಾಗಿ ಒಂದು ಮಸೂದೆಯನ್ನು ತರಬೇಕೆಂದಿದ್ದಾರೆ. ಆ ಮಸೂದೆಯನ್ನು ಅಂಗೀಕಾರ ಮಾಡತಕ್ಕದು ಅಥವಾ ಬಿಡತಕ್ಕದು ಸಭೆಗೆ ಸೇರಿದ್ದು. ನಾನು ವಿರೋಧ ಪಕ್ಷದ ನಾಯಕನಾಗಿರುವಾಗ, ಈ ದೇಶದಲ್ಲಿ ದುರ್ಭಿಕ್ಷ ಪರಿಸ್ಥಿತಿ ಇರುವಾಗ, ಈ ಮಸೂದೆಯನ್ನು ಸಭೆ ಅಂಗೀಕಾರ

(ಶ್ರೀ ಎಸ್. ಶಿವಪ್ಪ)

ಮಾಡಿದರೂ ಕೂಡ ನಾನು ಅದರ ಸೌಲಭ್ಯವನ್ನು ತೆಗೆದುಕೊಳ್ಳುವುದಿಲ್ಲ ಎಂದು ಈ ದಿವಸ ಹೇಳುತ್ತೇನೆ. ಅದಕ್ಕಾಗಿ ಖರ್ಚು ಮಾಡತಕ್ಕ ಹಣವನ್ನು ವಿನಿಯೋಗ ಮಾಡಿ ಒಂದೊಂದು ತಾಲ್ಲೂಕಿನಲ್ಲಿಯೂ ಒಂದು ಗಂಜಿ ಕ್ಷೇತ್ರವನ್ನು ತೆಗೆದರೆ ಅದಕ್ಕಿಂತಲೂ ಹೆಚ್ಚಿನ ಸಂತೋಷ ನನಗೆ ಬೇರೊಂದಿಲ್ಲ ಎಂದು ಸಭಾಪತಿಗಳ ಮೂಲಕ ನಾನು ಸಭೆಗೆ ತಿಳಿಸುತ್ತಿದ್ದೇನೆ.

4–30 P.M.

ಸಭಾಪತಿಯವರೇ, ಇವತ್ತು ದೇಶದ ಪರಿಸ್ಥಿತಿ ಇಂತಹ ಒಂದು ದುರ್ಭರವಾದ ಹಾಗೂ ಕ್ಷಾಮದ ದವಡೆಯಲ್ಲಿ ಸಿಲುಕಿರುವ ಕಾಲದಲ್ಲಿ ಸರ್ಕಾರದವರು ಈಗ ಮತ್ತೊಮ್ಮೆ ದೇಶದ ಜನತೆಯನ್ನು ಅನ್ನವಿಲ್ಲದೆ ಕ್ಷಾಮದ ಪರಿಸ್ಥಿತಿಗೆ ತಂದಿಟ್ಟಿದ್ದಾರೆ. ಆದರೆ ಮಳೆ ಹೋಗಿರುವುದರಿಂದ ಈ ಕಾಂಗ್ರೆಸ್ ಸರ್ಕಾರವನ್ನು ದೂಷಣೆ ಮಾಡುತ್ತಾ ಇಲ್ಲ. ಅದು ದೈವ ನಿಯಾಮಿಕವಾದುದು. ಸುಮಾರು 22 ಸಾವಿರ ಕೋಟಿ ರೂಪಾಯಿಗಳನ್ನು ಇಡೀ ಭಾರತದೇಶದಲ್ಲಿಯೂ ಮತ್ತು ಮೈಸೂರು ದೇಶದಲ್ಲಿ ಕೇವಲ ಕೆಲವು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಈಗಿನ ಕ್ಷಾಮದ ಪರಿಸ್ಥಿತಿಯನ್ನು ತಡೆಗಟ್ಟುವುದಕ್ಕೆ ಆಗಲಿಲ್ಲ. ಸುಮ್ಮನೆ ಆಕಾಶವನ್ನೇ ನೋಡುತ್ತಾ ಸರ್ಕಾರದವರು ಎಷ್ಟೋ ನೀರಾವರಿ ಯೋಜನೆಗಳನ್ನು ಮಾಡಲಿಲ್ಲ. ನಮ್ಮ ದೇಶದಲ್ಲಿರತಕ್ಕ ನೀರನ್ನು ತಡೆದು ಜನಗಳಿಗೆ ಕೊಡದೆ ವೃಥಾ ಹಣವನ್ನು ವ್ಯಯಮಾಡುತ್ತಿದ್ದಾರೆ. ಹಿಂದೆ ಈ ದೇಶದಲ್ಲಿ ಬೇಜವಾಬ್ದಾರಿಯಿಂದ ಕೂಡಿದ್ದಂಥ ಸರ್ಕಾರ ಇರುವಾಗ್ಗೆ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿದರಿಂದಲೇ ಈಗ ನಮ್ಮ ಜನ ನೀರು ಕುಡಿಯುತ್ತಿದ್ದಾರೆ. ಮಂಡ್ಯದಲ್ಲಿ ಅವರಿಂದ ಸ್ವಲ್ಪಮಟ್ಟಿಗೆ ನೀರಾವರಿ ಯೋಜನೆಗಳು ಆಗುತ್ತಿವೆ. ಇಡೀ ದೇಶದ ಜನ ಆ ನೀರನ್ನು ಈಗಲೂ ನೋಡುತ್ತಿದ್ದಾರೆ. ಆದರೆ ಈಗ ನೀವು ಕಟ್ಟುವಂಥ ಅಣೆಕಟ್ಟುಗಳಿಂದಲೂ ಸ್ವಲ್ಪ ನೀರನ್ನು ಕೊಡಬಹುದಾಗಿತ್ತು. ಆ ಕೆಲಸವೇನೂ ಆಗಲಿಲ್ಲ. ಬೇರೆ ಕಡೆಗಳಲ್ಲಿ ಜನರು ನೀರಿಲ್ಲದೆಯೇ ಸಾಯುತ್ತಿದ್ದಾರೆ. ಯಾರೇ ಮಂತ್ರಿಗಳಾಗಿರಲಿ ಅವರು ಇವತ್ತು ನಾನು ಮುಖ್ಯ ಮಂತ್ರಿಗಳಾದ ಮೇಲೆ ನನ್ನಿಂದ ಒಂದು ಅಣೆಕಟ್ಟಿನ ಶಂಕು ಸ್ಥಾಪನೆಯಾಗಬೇಕು ಎಂದು ಇರಬಹುದು. ಹಿಂದಿನ ಮಾಜಿ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ನಿಜಲಿಂಗಪ್ಪನವರು ಮೂರು ವರ್ಷಗಳ ಕೆಳಗೆ ಹೇಮಾವತಿಗೆ ಅಸ್ತಿಭಾರ ಶಿಲೆಯನ್ನು ಹಾಕಿದರು. ಈಗ ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರು ಬಂದರು. ಇವರೂ ಕೂಡ ಹೋಗಿ ಆ ರೀತಿ ಹಾಕಬೇಕಾಗಿದೆ.

ಶ್ರೀ ವೀರೇಂದ್ರ ಪಾಟೀಲ್.—ನಾನು ಅಸ್ತಿಭಾರಶಿಲೆಯನ್ನು ಹಾಕಲಿಲ್ಲ. ಬಹುಶಃ ತಮಗೂ ಆಹ್ವಾನ ಪತ್ರಿಕೆ ಬಂದಿರಬಹುದು. ಒಂದು ಕೆಲಸದ ಪ್ರಾರಂಭೋತ್ಸವ ಮಾಡುವುದಕ್ಕೆ ನಾನು ಹೋಗಿದ್ದೆ. ಹೇಮಾವತಿ ಅಸ್ತಿಭಾರ ಶಿಲೆಯನ್ನು ಮಾನ್ಯ ಶ್ರೀ ನಿಜಲಿಂಗಪ್ಪನವರು ಬಹಳ ದಿವಸಗಳ ಹಿಂದೆಯೇ ಹಾಕಿದ್ದಾರೆ.

ಶ್ರೀ ಎಸ್. ಶಿವಪ್ಪ.—ನಾನು ಚೀಫ್ ಇಂಜಿನಿಯರನ್ನು ಕೇಳಿದೆ. ಹೇಮಾವತಿಗೆ ಮಾನ್ಯ ಶ್ರೀ ನಿಜಲಿಂಗಪ್ಪನವರು ಅಸ್ತಿಭಾರ ಶಿಲೆಯನ್ನು ಹಾಕಿದ್ದಾರೆಂದು, ಅಲ್ಲಿಗೆ ಇದಕ್ಕಾಗಿ 4–5 ಸಾರಿ ಹೋಗಿದ್ದಾರೆಂದೂ ಕೇಳಿದೆ. ಒಂದು ಸಾರಿ ಗುದ್ದಲಿ ಪೂಜೆಗೆ, ಬಾಗಿಲು ಇಡುವುದಕ್ಕೆ ಒಂದು ಸಾರಿ, ಕಿಟಿಕಿ ಇಡುವುದಕ್ಕೆ ಒಂದು ಸಾರಿ—ಹೀಗೆ ಇನ್ನೂ ಎರಡು ಮೂರು ಸಾರಿ ಅವರು ಅಲ್ಲಿಗೆ ಹೋಗಿದ್ದಾರೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿದ ಹಾಗೆ ಇವರೂ ಒಂದು ಕಲ್ಲು ಹಾಕಿ ಬಂದಿದ್ದಾರೆ. ಇರಲಿ. ಸಂತೋಷ. ಒಟ್ಟಿನಲ್ಲಿ ಇವತ್ತು ಇವರೆಲ್ಲರೂ ಸಮಾರಂಭಗಳಲ್ಲಿ ಮಗ್ನರಾಗಿದ್ದಾರೆಯೇ ಹೊರತು ಪ್ರಾಜೆಕ್ಟುಗಳಲ್ಲಿ ಅನೇಕ ಕೆಲಸಗಳು ಪ್ರಾರಂಭವಾಗಿದ್ದರೂ ನಿರುದ್ಯೋಗಿಗಳಿಗೆ ಎಷ್ಟೋ ಕೆಲಸಗಳನ್ನು ಕೊಡಬಹುದಾಗಿತ್ತು. ಆ ರೀತಿ ಮಾಡಲಿಲ್ಲ. ಇವತ್ತು ಲಕ್ಷಾಂತರ ಜನಗಳು ಕೆಲಸಕ್ಕಾಗಿ ಅಲೆಯುತ್ತಿದ್ದಾರೆ. ಹೇಮಾವತಿ ಪ್ರಾಜೆಕ್ಟ್ ಆಗಲೀ, ಕೃಷ್ಣಾ ಪ್ರಾಜೆಕ್ಟ್ ಆಗಲೀ ಅಲ್ಲಿ ಪ್ರಾರಂಭಮಾಡಬೇಕಾಗಿರುವ ಚಾನಲ್ಸ್ ಏನಿವೆಯೋ ಅವನ್ನು ಸರ್ವೇ ಮಾಡಿಸಿ ಆ ಕಾರ್ಯಗಳನ್ನು ಪ್ರಾರಂಭ ಮಾಡಿದರೆ ಲಕ್ಷಾಂತರ ಜನಗಳಿಗೆ ಕೆಲಸಗಳನ್ನು ಕೊಡಬಹುದು. ಈಗ ಆ ಕೆಲಸ ಮಾಡದೆ ಬರೀ ಅಸ್ತಿಭಾರ ಹಾಕಿದರೆ ಏನೂ ಪ್ರಯೋಜನವಾಗುವುದಿಲ್ಲ. ಇವೆರಡು ಪ್ರಾಜೆಕ್ಟುಗಳಿಗೂ ಕಾಲುವೆ ಕೆಲಸಗಳನ್ನು ಕೂಡಲೇ ತೆಗೆದುಕೊಳ್ಳಬೇಕು. ಏಕೆಂದರೆ ಈಗ ಚನ್ನರಾಯಪಟ್ಟಣ ಮತ್ತು ಕೃಷ್ಣರಾಜಪೇಟೆಗಳಲ್ಲಿ ಅನೇಕರಿಗೆ ಕೆಲಸವಿಲ್ಲ. ಕೂಲಿ ಎಷ್ಟು ಕೊಟ್ಟರೂ ಅಷ್ಟಕ್ಕೇ ಬರುತ್ತಾರೆ. ನಿಮ್ಮ ಕೆಲಸ ಸುಲಭವಾಗುತ್ತದೆ. ಅದೇ ರೀತಿಯಲ್ಲಿ ಕೃಷ್ಣಾ ಪ್ರಾಜೆಕ್ಟಿನ ಕಾಲುವೆಯನ್ನೂ ತೆಗೆಯಬಹುದು. ಹಿಂದೆ ಕ್ಷಾಮ ಬಂದಾಗ್ಗೆ ಅನೇಕ ದೊಡ್ಡ

ದೊಡ್ಡ ಕೆಲಸಗಳನ್ನು ರಿಯಾಯಿತಿ ದರದಲ್ಲಿ ಮಾಡಿದ್ದಾರೆ. ಚಿತ್ರದುರ್ಗ ಜಿಲ್ಲೆಯಿಂದ ರಾಯ ದುರ್ಗದವರೆಗೆ ರೈಲು ಮಾರ್ಗ ಮತ್ತು ಇನ್ನೂ ಅನೇಕ ಕೆಲಸಗಳು ಆಗಬೇಕಾಗಿವೆ. ಆದುದರಿಂದ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳ ಕೆಲಸಗಳನ್ನು ಕೂಡಲೇ ಪ್ರಾರಂಭ ಮಾಡಿದರೆ ಅನೇಕ ಜನಗಳಿಗೆ ಉದ್ಯೋಗ ಸಿಗುತ್ತದೆ. ಈ ಕೆಲಸವನ್ನು ಮಾಡತಕ್ಕ ಸಾಧನ ಒಂದು ಏಜೆನ್ಸಿ ಏನಿದೆ, ಅದು ಬಹಳ ಮುಖ್ಯವಾದುದು. ಈ ಕೆಲಸವನ್ನು ಭಾರತ ಸೇವಾ ಸಮಾಜ ಹಾಗೂ ತಾಲ್ಲೂಕು ಬೋರ್ಡುಗಳ ಮುಖಾಂತರ ಮಾಡಿಸುತ್ತೇವೆಂದು ಹೇಳಿದರು. ಅದು ಸರಿಯಲ್ಲ. ಏಕೆಂದರೆ ಭಾರತ ಸೇವಾ ಸಮಾಜದಲ್ಲಿ ಕಾಂಗ್ರೆಸ್ಸಿನವರೇ ಇದ್ದಾರೆ. ನಮ್ಮ ಮಾನ್ಯ ಶ್ರೀ ಕಂಠಿಯವರೇ ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಅದರಲ್ಲಿ ಸೇಕಡ 90 ರಷ್ಟು ಕಾಂಗ್ರೆಸ್ಸಿನವರು ಇದ್ದಾರೆ. ಅದಕ್ಕಿಂತಲೂ ಹೆಚ್ಚಿಗೆ ತಾಲ್ಲೂಕು ಬೋರ್ಡುಗಳು ಏನಿವೆ ಅವಕ್ಕೆ ಖಂಡಿತವಾಗಿ ದಯವಿಟ್ಟು ಈ ಕೆಲಸಗಳನ್ನು ವಹಿಸಬಾರದು. ಏಕೆಂದರೆ ಈಗ ತಾಲ್ಲೂಕು ಬೋರ್ಡುಗಳ ಚುನಾವಣೆ ಆಗಬೇಕಾಗಿದೆ. ಅಲ್ಲಿ ಅನೇಕರಲ್ಲಿ ವೈಮನಸ್ಸು ಹೆಚ್ಚು ಹೆಚ್ಚಾಗಿ ಈಗಾಗಲೇ ಬೆಳೆಯುತ್ತಿದೆ. ಈಗ ಅಲ್ಲಿ ಆಗತಕ್ಕ ತಾಲ್ಲೂಕು ಬೋರ್ಡುಗಳ ಚುನಾವಣೆಗೋಸ್ಕರ ಇಂತಹ ಸಿದ್ಧತೆಯನ್ನು ಇವರು ಮಾಡಿ ಕೊಂಡಿದ್ದಾರೆ. ಆದ್ದರಿಂದ ಸರ್ಕಾರದವರು ಈ ತಾಲ್ಲೂಕು ಬೋರ್ಡುಗಳನ್ನು ರದ್ದು ಮಾಡಿ ಅಲ್ಲಿಗೆ ಒಬ್ಬ ಸ್ಪೆಷಲ್ ಅಡ್ಮಿನಿಸ್ಟ್ರೇಷನ್ ಆಫೀಸರನ್ನು ನೇಮಕ ಮಾಡಿ ಅವರ ಮುಖಾಂತರ ಈ ಕೆಲಸ ಗಳನ್ನು ಮಾಡಿಸಿದರೆ ಸ್ವಲ್ಪಮಟ್ಟಿಗೆ ಜನರಿಗೆ ಸೌಲಭ್ಯ ಸಿಗುತ್ತದೆ. ಒಂದೊಂದು ಹಳ್ಳಿಯಲ್ಲಿ ಒಂದೊಂದು ಕೆಲಸವಾದರೂ ಆಗುತ್ತದೆ. ಕೆರೆಯ ಹೂಳು ತೆಗೆಯುವ ಕೆಲಸ ಬಾವಿ ಕೆಲಸ ಮತ್ತು ರಸ್ತೆ ಕೆಲಸಗಳೂ ಸಹ ಆಗುತ್ತವೆ. ಒಂದು ಹಳ್ಳಿಗೆ ಒಂದು ಕೆಲಸ ಇರಬೇಕು. ಇಷ್ಟೊಂದು ಕೆಲಸ ಗಳನ್ನು ಈ ದೇಶದಲ್ಲಿ ನಿರ್ಮಾಣಮಾಡುವುದಾದರೆ ಪ್ರತಿಯೊಂದು ಹಳ್ಳಿಯಲ್ಲಿರತಕ್ಕ ಜನಗಳಿಗೆ ನೇರ ವಾಗಿ ಕೆಲಸ ಸಿಗುವುದಕ್ಕೆ ಸಾಧನೆಯಾಗುತ್ತದೆ. ಈಗಾಗಲೇ ಜನಗಳು ಅನ್ನವಿಲ್ಲದೆ ಸಾಯುತ್ತಿ ದ್ದಾರೆ. ಕೆಲವು ಪ್ರದೇಶಗಳಲ್ಲಿ ಗಂಜಿ ಕೇಂದ್ರಗಳನ್ನು ಶೀಘ್ರವಾಗಿ ತೆರೆಯುವ ಪ್ರಯತ್ನ ಮಾಡಬೇಕು. ಒಂದು ತಾಲ್ಲೂಕಿನಿಂದ ಒಂದು ಹೋಬಳಿಗೆ ಸುಮಾರು ಹತ್ತತ್ತು ಹಳ್ಳಿಗಳಿಗೆ ಒಂದೊಂದು ಗಂಜಿ ಕೇಂದ್ರವನ್ನು ತೆರೆದರೆ ನಿರ್ಗತಿಕರಿಗೆ ಅನುಕೂಲವಾಗುತ್ತದೆ. ಇತ್ತೀಚೆಗೆ ಕುಡಿಯುವ ನೀರೇ ಸಿಗುತ್ತಿಲ್ಲ. ಸೇದುವ ಬಾವಿಗಳಲ್ಲಿಯೂ ನೀರಿಲ್ಲ. ಒಣಗಿಹೋಗಿವೆ. ಈಗ ಭೂಮಿಯನ್ನು ಆಳ ಮಾಡುವ ಹೊಸ ಯಂತ್ರಗಳು ಬಂದಿವೆ. ಅವುಗಳನ್ನು ಉಪಯೋಗಿಸಿ ಒಂದು ದಿವಸಕ್ಕೆ ಒಂದು ಬಾವಿಯಂತೆ ತೆಗೆಯಬಹುದು. ಪ್ರತಿಯೊಂದು ತಾಲ್ಲೂಕಿಗೂ 2-3 ಯಂತ್ರಗಳನ್ನು ಕೊಟ್ಟರೆ ಬಹುಶಃ ಬಾವಿಗಳಿಂದ ನೀರನ್ನು ತೆಗೆಯುವ ಕೆಲಸಗಳನ್ನು ಮಾಡಬಹುದು. ಆಗ ಜನರು ಬದುಕುತ್ತಾರೆ. ಇಲ್ಲದಿದ್ದರೆ ನೀರು ಸಿಗುವುದೇ ಬಹಳ ಕಷ್ಟವಾಗುತ್ತದೆ. ದನಗಳಿಗೆ ಮೇವನ್ನು ಒದಗಿಸುವುದಕ್ಕೆ ಸರ್ಕಾರದವರೇ ನೇರವಾಗಿ ದನಗಳ ಮೇವನ್ನು ಸಾಗಾಣಿಕೆಮಾಡುವ ವ್ಯವಸ್ಥೆ ಯನ್ನು ತ್ರೀವ್ರವಾಗಿ ಮಾಡಿ ಈ ಕ್ಷಾಮದ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಇದಕ್ಕೋಸ್ಕರ ನಾನು ಮೊದಲೇ ಸಲಹೆ ಮಾಡಿದ ರೀತಿಯಲ್ಲಿ ಈಗಿನ ಪರಿಸ್ಥಿತಿಯನ್ನು ನಿಜವಾಗಿ ತುರ್ತು ಪರಿಸ್ಥಿತಿಯೆಂದು ಪರಿಗಣಿಸಿ ಕೂಡಲೇ ಇಡೀ ದೇಶದ ಅರ್ಧಭಾಗವನ್ನು ಕ್ಷಾಮ ಪ್ರದೇಶವೆಂದು ಸಾರಿ ಎಲ್ಲಾ ತುರ್ತು ಕಾರ್ಯಗಳನ್ನು ಎಲ್ಲಾ ಕಡೆಗಳಲ್ಲಿಯೂ ಮಾಡಬೇಕು. ಬಹು ಮುಖ್ಯವಾಗಿ ಒಂದು ಫ್ಯಾಮಿನ್ ಕಮಿಷನ್ನನ್ನು ನೇಮಕಮಾಡಬೇಕು. ಇದರಲ್ಲಿ ರಾಜಕೀಯ ಪ್ರವೇಶ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ನಿಷ್ಪಕ್ಷಪಾತವಾಗಿ ಅವರು ತಮ್ಮ ಅಧಿಕಾರದ ಹುದ್ದೆಯಿಂದ ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸರ್ಕಾರದವರು ಕೂಡಲೇ ಫ್ಯಾಮಿನ್ ಕಮಿಷನ್ನನ್ನು ನಿರ್ಮಾಣಮಾಡಿ ಈ ಕೆಲಸವನ್ನು ಮಾಡುವುದು ಒಳ್ಳೆಯದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಪಂಚಗಾವಿ (ಗೋಕಾಕ).—ಮಾನ್ಯ ಅಧ್ಯಕ್ಷರೇ, ಈ ಪ್ರಾಂತ್ಯದ ಉತ್ತರದ ಬೆಳಗಾಂ, ಬಿಜಾಪುರ ದಂಡೆಯಿಂದ ಹಿಡಿದು, ಬೆಂಗಳೂರು, ಕೋಲಾರದವರೆಗೆ ಸುಮಾರು 16 ಜಿಲ್ಲೆ ಗಳಷ್ಟು ಭಾಗ ಅತ್ಯಂತ ದಾರುಣವಾದ ಬರಗಾಲಕ್ಕೆ ತುತ್ತಾಗಿದೆ. ಮೊದಲು ಮೇ ತಿಂಗಳಲ್ಲಿ ಅಲ್ಪಸ್ವಲ್ಪ ಮಳೆಯಾಗಿ ಬಿತ್ತನೆಯಾಗಿದೆ. ಆಮೇಲೆ ಮಳೆ ಏನೂ ಬರುತ್ತಲೇ ಇಲ್ಲ. ಈ ತಂಪು ಹವೆಯನ್ನು ನೋಡಿದರೆ ಮಳೆ ಬರುವ ಲಕ್ಷಣ ಕೂಡ ಕಾಣುತ್ತಾ ಇಲ್ಲ. ನಾವು ಅತ್ಯಂತ ಭೀಕರವಾದ ಬರಗಾಲವನ್ನು ಎದುರಿಸಬೇಕಾಗಿದೆ. ಎಲ್ಲಿ ನೋಡಿದರೂ ಹಾಹಾಕಾರ, ಜನರಿಗೆ ಕೆಲಸವಿಲ್ಲ, ತಿನ್ನಲು ಆಹಾರವಿಲ್ಲ, ಇಂಥ ಪರಿಸ್ಥಿತಿ ಉಂಟಾಗಿದೆ. ಬಡಬಗ್ಗರಿಗೆ ಅಂತೂ ಬಹಳ ಬಿಕ್ಕಟ್ಟಿನ ಪರಿಸ್ಥಿತಿಯಾಗಿದೆ. ಹಿಂದಿನ ಬರಗಾಲ ಬೇರೆ ರೀತಿಯಾಗಿತ್ತು. ಆದರೆ ಇಂದಿನ ದಿವಸ ಆ ಪರಿಸ್ಥಿತಿ ಇಲ್ಲ. ಊರುಗಳನ್ನು ಬಿಟ್ಟು ಹೋಗಲೂ ಕೂಡ ಅವಕಾಶವಿಲ್ಲದಾಗಿದೆ. ಇಂಥ ಪರಿಸ್ಥಿತಿಯಲ್ಲಿ ಜನರು ದಿವಸವನ್ನು ಕಳೆಯುವುದು ಹೇಗೆ ಎನ್ನುವ ಮಾತನ್ನು ನಾವು ಪೂರ್ತಿಯಾಗಿ ವಿಚಾರ ಮಾಡ ಬೇಕಾಗುತ್ತದೆ. ಬರಗಾಲವು ನಮ್ಮ ದೇಶಕ್ಕೆ ಹಿಂದಿನಿಂದಲೂ ಬಂದು, ಇದರ ಅನುಭವವನ್ನು

(ಶ್ರೀ ಎ. ಆರ್. ಪಂಚಗಾವಿ)

ನಾವು ಉಣ್ಣುತ್ತಾ ಬಂದಿದ್ದೇವೆ. ಅದರಲ್ಲೂ ಅನೇಕ ಲಕ್ಷಾಂತರ ಜನರು ಜೀವವನ್ನು ಕಳೆದುಕೊಂಡ ಇತಿಹಾಸವನ್ನು ನೋಡಿದ್ದೇವೆ. ಮೊನ್ನೆ ಮೊನ್ನೆಯ 1943 ದುರಂತವನ್ನು ನೋಡಿದರೆ ನಮಗೆ ಇದರ ನೈಜ ಚಿತ್ರವು ಅರಿವಾಗುತ್ತದೆ. ಇಂಥ ಭೀಕರ ಪರಿಸ್ಥಿತಿ ನಮ್ಮ ಮುಂದೆ ಇರುವಾಗ ನಾವು ಇದರಿಂದ ಕಳೆದ 20 ವರ್ಷಗಳಿಂದ ಕಲಿತ ಪಾಠವೇನು, ಸ್ವಾತಂತ್ರ್ಯ ಸಿಕ್ಕಿದನಂತರ ನಾವು ಮಾಡಿದ್ದೇನು ಎನ್ನುವುದನ್ನು ಕೇಳುವಷ್ಟುಮಟ್ಟಿಗೆ ನಾವು ಬರುತ್ತಿದ್ದೇವೆ. ಈಗ ನೋಡಿದರೂ ಕೂಡ ಮತ್ತೂ ಅದೇ ಪರಿಸ್ಥಿತಿ ಬರುತ್ತದೆ. ದೇಶದ ಜನಸಂಖ್ಯೆಯು ದಿನೇ ದಿನೇ ಬೆಳೆಯುತ್ತಾ ಇದೆ. ಅದೇ ಪ್ರಮಾಣದಲ್ಲಿ ಆಹಾರಧಾನ್ಯ ಬೆಳೆಯುತ್ತಾ ಇಲ್ಲ. ಇಂದು ಕೆಲವು ಪತ್ರಿಕೆಗಳಲ್ಲಿ ಮತ್ತು ಕೆಲವು ವರದಿಗಳಲ್ಲಿ ಪರಿಸ್ಥಿತಿಯನ್ನು ನೋಡಿದರೆ ತಿಳಿಯುತ್ತದೆ. ನಮ್ಮ ದೇಶದಲ್ಲಿ ನ್ಯಾಶನಲ್ ಕೌನ್ಸಿಲ್ಸ್ ಆಫ್ ಅಪ್ಲೈಡ್ ಇಕಾನಾಮಿಕ್ ರಿಸರ್ಚ್, ಅವರು ಮಾಡಿದ ಕೆಲವು ಸರ್ವೆಗಳಿಂದ ಈರೀತಿ ತಿಳಿಯುತ್ತದೆ. Ten million of the rural population earn on daily average 27 paise or an annual income of Rs. 90 only. ಸಾಧಾರಣ ದಿವಸಗಳಲ್ಲಿ ಕೇವಲ 25 ಪೈಸೆ ಸಿಕ್ಕುವಂತಹ ಜನ ನಮ್ಮ ದೇಶದಲ್ಲಿ ಒಂದು ಕೋಟಿ ಇದ್ದಾರೆ. ಇದಲ್ಲದೆ ಕಳೆದ ಮೂರನೆಯ ಪಂಚವಾರ್ಷಿಕ ಯೋಜನೆಗಳಿಂದ ದೇಶದ ಉತ್ಪನ್ನ ಏರುಪೇರಾಗುತ್ತಾ ಇದೆ. ಶ್ರೀಮಂತರು ಶ್ರೀಮಂತರಾಗುತ್ತಾ ಇದ್ದಾರೆ, ಬಡವರು ಅಧೋಗತಿಗೆ ಇಳಿಯುತ್ತಾ ಇದ್ದಾರೆ. The share of income in income of the top 5 per cent of the house-hold went up from 14 per cent in 1952-53 to 20.4 per cent in 1962 and that of the bottom 20 per cent declines from 7.5 per cent to 6.4 per cent. ಹೀಗಿದ್ದರೆ ಮೇಲಿನವರು ಮೇಲೆ ಹೋಗುತ್ತಾ ಇದ್ದಾರೆ, ಕೆಳಗಿನವರು, ಕೆಳಗಡೆ ಬರುತ್ತಾ ಇದ್ದಾರೆ. ಇಂಥ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗಿದೆ. ಇದರಲ್ಲಿ ಆಹಾರಧಾನ್ಯದ ವಿಚಾರ ಕೂಡ ಇದೆ. 1961 ಪರ್ ಕ್ಯಾಪಿಟಾ 16.4 ಔನ್ಸ್ ಆಹಾರಧಾನ್ಯ ಸಿಗುತ್ತಿತ್ತು, ಈಗ 15.7 ಆಗಿದೆ. ಇದು ಇನ್ನೂ ಕೆಳಗಡೆ ಬರುತ್ತಾ ಇದೆ. ಲೆಕ್ಕ ನೋಡಿದರೆ, 250 ಮಿಲಿಯ ಜನರು ಹಿಂದೂಸ್ಥಾನದಲ್ಲಿ ಅಂಡರ್ ನರಿಶ್ಡ್ ಅಥವಾ ಮಾಲ್‌ನರಿಶ್ಡ್ ಆಗಿದ್ದಾರೆ. 25 ಕೋಟಿ ಜನರಿಗೆ ಸರಿಯಾದ ಊಟ ಸಿಗುತ್ತಾ ಇಲ್ಲ. ಇದರಿಂದ ನಮ್ಮ ಪರಿಸ್ಥಿತಿಯನ್ನು ಲೆಕ್ಕ ಹಾಕಬಹುದು. ಸಾಧಾರಣ ಒಬ್ಬ ಮನುಷ್ಯನಿಗೆ 23 ಕೆಲೊರಿ ಆಹಾರಧಾನ್ಯ ಕೊಟ್ಟರೆ, ಇನ್ನು 5 ಕೋಟಿ ಜನರಿಗೆ ಏನೂ ಸಿಗುತ್ತಾ ಇಲ್ಲ. ಇದನ್ನು ನಾವು ಪೂರ್ತಿಯಾಗಿ ವಿಚಾರ ಮಾಡಬೇಕು. ನಮ್ಮ ಗುರಿ ಏನೆಂಬುದನ್ನು ತಿಳಿದುಕೊಂಡರೆ ದೇಶದ ಬರಗಾಲವನ್ನು ತಡೆಯಬಹುದು. ನಮ್ಮ ಮೈಸೂರು ರಾಜ್ಯದ ಪರಿಸ್ಥಿತಿಯನ್ನು ನೋಡಿದರೆ, ಅದು ಇನ್ನಷ್ಟು ಬಿಕ್ಕಟ್ಟಾಗಿದೆ. ನಾವು ಕೆಲವು ನೀರಾವರಿ ಯೋಜನೆಗಳನ್ನು ಮಾಡಿದ್ದೇವೆ. ಆದರೂ ಕೂಡ ಅದರ ಪ್ರತಿಫಲ ಸಾಕಷ್ಟು ಬರುತ್ತಾ ಇಲ್ಲ. ದುರ್ದೈವದಿಂದ ನಾವು ಹೊರಗಿನಿಂದ ಗೊಬ್ಬರ ಮುಂತಾದುವುಗಳನ್ನು ತರಿಸಿ ಹಂಚುವಾಗಲೂ ಅಲ್ಲಿಯ ಅನೇಕ ತರದ ದುರ್ವ್ಯವಹಾರಗಳು ನಡೆಯುತ್ತಿದೆ. ಸರಿಯಾದ ರೀತಿಯಲ್ಲಿ ರೈತನಿಗೆ ಗೊಬ್ಬರವು ಸಿಗುತ್ತಾ ಇಲ್ಲ. ಅದೇ ರೀತಿ ಸಾಲ ಹಂಚಿಕೆಯಲ್ಲೂ ಬೇಕಾದಷ್ಟು ಅವ್ಯವಹಾರಗಳು ನಡೆಯುತ್ತಿವೆ. ಈ ತರದ ಪರಿಸ್ಥಿತಿ ದೇಶದಲ್ಲಿ ಉಂಟಾಗಬೇಕಾದರೆ, ಇಂಥ ಅಪರಾಧಿಗಳನ್ನು ದಂಡಿಸುವವರೇ ಇಲ್ಲವೇ ಎನ್ನುವ ಮಾತನ್ನು ಕೇಳಬೇಕಾಗಿದೆ. ಇಂದು ಕೋ-ಆಪರೇಟಿವ್ ಸೊಸೈಟಿ, ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಬೇಕಾದಷ್ಟು ಅವ್ಯವಹಾರಗಳು ನಡೆಯುತ್ತಾ ಇವೆ. ರೈತನು ಕಟ್ಟಿದಂತಹ ಇಂಥ ಸಂಸ್ಥೆಗಳಲ್ಲಿ ಕೆಲವು ಹೆಗ್ಗಣಗಳು ಸೇರಿಕೊಂಡು ಇಂಥ ದಾರುಣವಾದ ಪರಿಸ್ಥಿತಿಯನ್ನು ಉಂಟುಮಾಡಿವೆ. ಪ್ರತ್ಯಕ್ಷವಾಗಿ ಉದಾಹರಣೆಗೆ ಹೇಳಬೇಕಾದರೆ, ಗೋಕಾಕ್ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಅಲ್ಲಿ ಅನೇಕ ರೀತಿಯ ಆರೋಪಗಳು ಬಂದಿವೆ. ಆದರೂ ಅದನ್ನು ಯಾವುದೇ ರೀತಿಯಲ್ಲಿ ಸರಿಪಡಿಸಲಿಲ್ಲ. ಅಲ್ಲಿಯ ಪರಿಸ್ಥಿತಿ ಎಲ್ಲಾ ಕೆಟ್ಟು ಹೋಗಿದೆ. ಅದೇ ರೀತಿಯಲ್ಲಿ ಇನ್ನೂ ಅನೇಕ ಕಡೆ ಇದೇ ರೀತಿಯ ಅವ್ಯವಹಾರಗಳು ನಡೆದು ನಮ್ಮ ಆಹಾರ ಧಾನ್ಯವನ್ನು ಬೆಳೆಯುವುದಕ್ಕೇ ಬಹಳ ತೊಂದರೆಯಾಗಿದೆಂಬುದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕು. ಇನ್ನು ಬೇರೆ ಯಾವ ರೀತಿಯ ಕಷ್ಟನಷ್ಟಗಳನ್ನು ನಾವು ಎದುರಿಸಬೇಕಾದ ಪರಿಸ್ಥಿತಿ ಬಂದರೂ ಕೂಡ ಈಗ ಮಾನ್ಯ ಶಿವಪ್ಪನವರು ಹೇಳಿದಂತೆ, ಯಾರು ಕೆಲಸಗಳನ್ನು ಮಾಡಬೇಕೆಂಬುದನ್ನು ಸ್ಪಷ್ಟಪಡಿಸಬೇಕು. ಕೆಲವು ಕೆಲಸಗಳನ್ನು ಪಿ.ಡಬ್ಲ್ಯು.ಡಿ.ಯವರು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಪಿ.ಡಬ್ಲ್ಯು.ಡಿ.ಯನ್ನು ಅವಲಂಬಿಸಿ ಕೂತರೆ, ಅನೇಕ ಕಡೆ ಇವರು ಕೂಡ ಸರಿಯಾದ ಕೆಲಸ ಮಾಡುತ್ತಾ ಇಲ್ಲ. ಅವರಲ್ಲಿ ಸ್ಟಾಫ್ ಕೂಡ ಇಡೀ ಕೆಲಸವನ್ನು ತೆಗೆದುಕೊಳ್ಳುವಷ್ಟು ಇಲ್ಲ. ಇನ್ನು ತಾಲ್ಲೂಕುಗಳಲ್ಲಿ 5-6 ಕೆಲಸಗಳನ್ನು ತೆಗೆದುಕೊಳ್ಳಬಹುದು. ಎರಡನೆಯದು, ಈ ಟಿ.ಡಿ.ಬಿ. ವಿಚಾರ. ಇಂದು ಅನೇಕ ಬೋರ್ಡುಗಳು ಸರಿಯಾದ

ವ್ಯವಸ್ಥೆಯಿಲ್ಲ. ಅವು ಕೆಲಸ ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ಅಲ್ಲಿ ಎಕ್ಸಿಕ್ಯೂಟಿವ್ ಆಫೀಸರ್ ಬಿ.ಡಿ.ಓ. ಇರುವವರು ಅಸಮರ್ಥರು, ಅನುಭವವಿಲ್ಲದವರು, ಮತ್ತು ಅವ್ಯವಹಾರ ಜನರಾಗಿರುತ್ತಾರೆ ಅವರು ಸ್ಪಷ್ಟವಾಗಿ ಹೇಳುತ್ತಾರೆ 'ನಾವು ಈ ಕೆಲಸ ತೆಗೆದುಕೊಳ್ಳುವುದಿಲ್ಲ, ನೀವು ಬೇಕಾದರೆ ಮಾಡಿ ಕೊಳ್ಳಿ ಎಂದು. ಅನೇಕ ತಾಲ್ಲೂಕುಗಳಲ್ಲಿ ಈ ಪರಿಸ್ಥಿತಿ ಇದೆ. ಇನ್ನು ಇದನ್ನು ಮಾಡುವವರು ಯಾರು ? ಜನರ ಹೊಟ್ಟೆಗೆ ಹಾಕುವವರು ಯಾರು ? ಅಂಥ ಇನ್‌ಎಫಿಷಿಯಂಟ್ ಜನರು ಅಲ್ಲಿದ್ದರೆ, ಅಂಥವರನ್ನು ಕಿತ್ತೊಗೆದು, ಬೇರೆ ಕೆಲಸಕ್ಕೆ ಹಾಕಬೇಕು. ಮತ್ತು ಅಲ್ಲಿ ಅತ್ಯಂತ ಸಮರ್ಥ ರಾದಂತಹ, ಒಳ್ಳೆಯ ಅಧಿಕಾರಿಗಳನ್ನು ಬರಗಾಲಪೀಡಿತ ಭಾಗದಲ್ಲಿ ನೇಮಿಸುವುದು ಅತ್ಯಾವಶ್ಯಕ ವೆಂದು ಹೇಳಬೇಕಾಗಿದೆ. ಈ ತರದ ಪರಿಸ್ಥಿತಿಯನ್ನು ಅನೇಕ ಸಲ ಮಾನ್ಯ ಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ಗೋಕಾಕದ ಪರಿಸ್ಥಿತಿ ಬಹಳ ದಾರುಣವಾದ ಪರಿಸ್ಥಿತಿಯಾಗಿದೆ. ಅಲ್ಲಿ ಅನೇಕ ಕೆಲಸ ಗಳನ್ನು ಈಗಾಗಲೇ ತೆಗೆದುಕೊಂಡರೂ, ಇನ್ನೂ ಹೆಚ್ಚಾಗಿ ತೆಗೆದುಕೊಳ್ಳಬೇಕಾಗಿದೆ.

ಟಿ.ಡಿ.ಬಿ. ಅಷ್ಟು ಸಮರ್ಥವಾದ ಬಾಡಿ ಆದರೂ ಕೂಡ ಅದರ ಕಾರ್ಯಕಲಾಪಗಳನ್ನು ನಿರ್ವಹಿಸುವ ಸಮರ್ಥರು ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಈವೊತ್ತಿನ ದಿವಸ ಟಿ.ಡಿ.ಬಿ. ಮತ್ತು ಪಿ.ಡಬ್ಲ್ಯೂ.ಡಿ. ಬಿಟ್ಟರೆ ಕೆಲಸವನ್ನು ನೀಗುವಂಥ ಸಂಸ್ಥೆ ಇನ್ನೊಂದಿಲ್ಲ. ಈ ರೀತಿಯಾಗಿರು ವುದರಿಂದ ನಾವು ಬಹಳ ಕಷ್ಟದ ಪರಿಸ್ಥಿತಿಯನ್ನು ದೇಶದಲ್ಲಿ ಎದುರಿಸಬೇಕಾಗಿದೆ. ಮುಖ್ಯವಾಗಿ ಕಾಮಗಾರಿ ವಿಷಯವಾಗಿ ಎಲ್ಲರೂ ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದಾರೆ. ಘಟಪ್ರಭಾ ಬಲದಂಡೆ ಕಾನಲ್ ಕೆಲಸವನ್ನು ತೆಗೆದುಕೊಂಡರೆ ಲಕ್ಷಾಂತರ ಜನಕ್ಕೆ ಕೆಲಸವನ್ನು ಒದಗಿಸಬಹುದು. ಈ ಮಾತನ್ನು ಅನೇಕ ವರ್ಷಗಳಿಂದ ಹೇಳುತ್ತಿದ್ದೇನೆ. ಹಿಡಕಲ್ ಡ್ಯಾಮ್ ಒಂದು ಮಟ್ಟಕ್ಕೆ ಬರುತ್ತಿದೆ. ಡ್ಯಾಂ ನೆಲವನ್ನು ಬಿಟ್ಟು ಮೇಲಕ್ಕೆ ಏರುತ್ತಿದೆ. ಆ ಡ್ಯಾಂ 1971ನೇ ಇಸವಿಯೊಳಗೆ ಪೂರ್ತಿ ಆಗಬಹುದು. ಅಷ್ಟರೊಳಗೆ ಬಲದಂಡೆ ಗುಡ್ಡದಲ್ಲಿ ಟನಲ್ ಹೊಡೆಯಬಹುದು. ಅದು ಒಂದೆರಡು ವರ್ಷದಲ್ಲಿ ಮುಗಿಯುವಂಥ ಕೆಲಸವಲ್ಲ.

Sri K. H. PATIL.—The Hon'ble Chief Minister was so much enthusiastic to say that it is a very important matter. Though so many Ministers are there, unfortunately, none of the Cabinet Ministers is taking interest to take notes of what we say. Please get them physically present here.

ಶ್ರೀ ಎ. ಆರ್. ಪಂಚಗಾವಿ.—ಆ ಕೆಲಸವನ್ನು ಈಗಿನಿಂದಲೇ ಪ್ರಾರಂಭ ಮಾಡಿದರೆ ಕೆಲವು ಭಾಗಕ್ಕಾದರೂ ನೀರು ಕೊಡಲು ಸಹಾಯಕವಾಗುತ್ತದೆ. ಇದರಿಂದ ಸ್ವಲ್ಪಮಟ್ಟಿಗೆ ಬರಗಾಲದ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕಳೆದ ವರ್ಷ ಬರಗಾಲದ ಪರಿಸ್ಥಿತಿಯನ್ನು ಎದುರಿಸಬೇಕಾದಾಗ, ಈಗಿನ ಕಾಂಗ್ರೆಸ್ ಅಧ್ಯಕ್ಷರು ಮತ್ತು ಹಿಂದಿನ ಮುಖ್ಯಮಂತ್ರಿಗಳು ಆದ ಶ್ರೀಮಾನ್ ನಿಜಲಿಂಗಪ್ಪನವರ ಕಡೆಗೆ ಮತ್ತು ಆಗಿನ ಪಿ.ಡಬ್ಲ್ಯು.ಡಿ. ಮತ್ತು ಈಗಿನ ಮುಖ್ಯ ಮಂತ್ರಿಗಳಾಗಿರುವ ಶ್ರೀಮಾನ್ ವೀರೇಂದ್ರ ಪಾಟೀಲರಲ್ಲಿ ಗೋಕಾಕ್ ಮಿಲ್ಸಿಗೆ ಕೊಡುವ ನೀರನ್ನು ನಿಲ್ಲಿಸಿ, ಅವರಿಗೆ ಶರಾವತಿ ಪವರ್ ಕೊಟ್ಟು, ನಮ್ಮ ಭಾಗದ ಜನಗಳಿಗೆ ಆ ನೀರನ್ನು ನೀರಾವರಿಗೆ ಕೊಟ್ಟರೆ ಉಪಕಾರವಾಗುತ್ತದೆ ಎಂದು ಕೇಳಿಕೊಂಡಿದ್ದಕ್ಕೆ ಆ ಪ್ರಕಾರ ಕೊಟ್ಟರು. ಅದರಂತೆ ನಮ್ಮ ಕಡೆ 17 ಸಾವಿರ ಎಕರೆಯಲ್ಲಿ 8 ಸಾವಿರ ಎಕರೆ ನೀರಾವರಿ ಮಾಡಲಾಗಿದೆ. ಅದರಲ್ಲಿ ಗೋಧಿ, ಕಡಲೆ ಮತ್ತು ಇತರ ಆಹಾರಧಾನ್ಯಗಳನ್ನು ಬೆಳೆದವು. ಈ ವರ್ಷವೂ ಆ ತರಹ ಪರಿಸ್ಥಿತಿ ಬರಬಹುದು. ಅದರಿಂದಾಗಿ ಮುಂದೆಯೂ ಗೋಕಾಕ್‌ನಲ್ಲಿರುವ ಮಿಲ್ಲಿಗೆ ಕುಡಿಯಲಿಕ್ಕೆ ಮಾತ್ರ ನೀರು ಮತ್ತು ಶರಾವತಿಯಿಂದ ಪವರ್ ಕೊಟ್ಟರೆ, ಅದರಿಂದ ಅನುಕೂಲವಾಗುತ್ತದೆ. ಕುಡಿಯಲಿಕ್ಕೆ ನೀರು ಎಷ್ಟು ಅವಶ್ಯಕವೋ ಅಷ್ಟನ್ನು ಕೊಟ್ಟು ಉಳಿದ ಪ್ರತಿಯೊಂದು ಹನಿಯನ್ನೂ ಇರ್ರಿಗೇಷನ್‌ಗೆ ಕೊಡುವುದು ಅತ್ಯಂತ ಅವಶ್ಯ ಎಂದು ಹೇಳುತ್ತೇನೆ.

ಇನ್ನು ಸ್ಕೇರ್ಸಿಟಿ ಏರಿಯಾದಲ್ಲಿ ದಿನಗಳು ಕೆಲವುಮಟ್ಟಿಗೆ ತುಂಬಿ ಹರಿಯುತ್ತಾ ಇದೆ. ಅಂತಹ ಕಡೆ ಎಲೆಕ್ಟ್ರಿಕ್ ಪಂಪ್‌ಸೆಟ್ಸ್ ಕೊಡಬೇಕು, ಯಾವ ಏರಿಯಾದಲ್ಲಿ ನೀರು ಇದೆ, ಅಂತಹ ಭಾಗಕ್ಕೆ ಪ್ರಿಯಾರಿಟಿ ಕೊಡಬೇಕು. ಯಾವ ಹಳ್ಳಿಗಳಲ್ಲಿ ನೀರು ಇರಲಿ, ಹೊಳೆಗಳಲ್ಲಿ ನೀರು ಇರಲಿ ಅಂತಹ ಕಡೆ ಮೊದಲು ಪ್ರಿಯಾರಿಟಿ ಕೊಡಬೇಕು. ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಈ ತರಹ ಮಾಡುವಂತೆ ಅವರಿಗೆ ಒತ್ತಾಯಪಡಿಸಬೇಕು ಎನ್ನುವ ಮಾತನ್ನು ಹೇಳಬಯಸುತ್ತೇನೆ.

(ಶ್ರೀ ಎ. ಆರ್. ಪಂಚಗಾವಿ)

ಅದಲ್ಲದೆ ಸರ್ಕಾರದವರು ಬಾವಿಗಳನ್ನು ತೆಗೆಯುವುದಕ್ಕೆ ಸಾಲವನ್ನು ಕೊಡಲಿಕ್ಕೆ ಲ್ಯಾಂಡ್ ಮಾರ್ಟ್‌ಗೇಜಿನವರಿಗೆ ಒಪ್ಪಿಸಿದ್ದಾರೆ. ಅಂತಹ ಕೆಲಸ ಸಾಕಷ್ಟು ಉತ್ತಮ ರೀತಿಯಿಂದ ನಡೆಯುತ್ತಿದೆ. ಅದನ್ನು ಇನ್ನೂ ಹೆಚ್ಚಾಗಿ ಬೆಳೆಸಲಿಕ್ಕೆ ಹೋಗಬೇಕು. ಮಾನ್ಯ ರಾಚಯ್ಯನವರು ಕಂದಾಯ ಮಂತ್ರಿಗಳಾಗಿದ್ದಾಗ್ಗೆ ಸಾಮೂಹಿಕ ಬಾವಿಗಳನ್ನು ಸರ್ಕಾರದ ಖರ್ಚಿನಿಂದಲೇ ತೆಗೆಸಿ ಜನಗಳಿಗೆ ನೀರನ್ನು ಒದಗಿಸುವ ಯೋಜನೆ ಮಾಡಬೇಕು ಎಂದು ಈ ಸಭೆಯಲ್ಲಿ ಜಾಹೀರುಪಡಿಸಿದ್ದರು. ಆ ಬಗ್ಗೆ ಇನ್ನೂ ಏನೂ ಕಾರ್ಯಕ್ರಮ ನಡೆದಿಲ್ಲ. ಅಂತಹ ಸಿಸ್ಟಂನ್ನು ಜಾರಿಗೆ ತಂದು ಸಾಮೂಹಿಕ ಬಾವಿಗಳನ್ನು ತೆಗೆಸಿ ಬಡಬಗ್ಗರಿಗೆ, ಸಣ್ಣ ಸಣ್ಣ ಜಮೀನುದಾರರಿಗೆ ಈ ತರಹ ನೀರಾವರಿ ಸೌಲಭ್ಯವನ್ನು ಒದಗಿಸಬೇಕು.

ಇನ್ನು ಬಂಡಿಂಗ್ ಅಥವಾ ಒಡ್ಡು ಹಾಕುವ ಯೋಜನೆ. ಇವನ್ನು ದೊಡ್ಡ ಪ್ರಮಾಣದಲ್ಲಿ ಮಾಡಿದರೆ ಸಾಕಷ್ಟು ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಡಬಹುದು. ಬಂಡಿಂಗ್ ಹಾಕುವುದರಿಂದ ಭೂಮಿಯಲ್ಲಿ ಬಿದ್ದಂಥ ಮಳೆ ನೀರು ಹರಿದುಹೋಗುವುದಿಲ್ಲ. ಇದರಿಂದ ಉತ್ತಮವಾದ ಮಣ್ಣು ಜಮೀನಿನಲ್ಲಿ ಹರಿದು ಹೋಗದಂತಾಗುತ್ತದೆ. ಈ ಒಂದು ಬಂಡಿಂಗ್ ಕೆಲಸವನ್ನು ಸಾಕಷ್ಟು ಪ್ರಮಾಣದಲ್ಲಿ ಮಾಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು.

ಇನ್ನು ಕೆರೆಗಳ ಬಗ್ಗೆ ಹೇಳುವುದಾದರೆ 2 ಪರ್ಸೆಂಟೂ ಕೂಡ ಸರಿಯಾದ ರಿಪೇರಿ ಇಲ್ಲ ಒಂದು ಲಕ್ಷಕ್ಕಿಂತ ಹೆಚ್ಚು ಬೇಕಾದರೆ ಚೀಫ್ ಇಂಜನಿಯರ್ ಹತ್ತಿರ ಹೋಗಬೇಕು, ಒಂದು ಕೆರೆ ಮಂಜೂರು ಮಾಡಿದರೆ ಕೆಲಸ ಪೂರೈಸಲು 3–4 ವರ್ಷ ತೆಗೆದುಕೊಳ್ಳುತ್ತಾರೆ. ಪರ್ಕೋಲೇಷನ್ ಟ್ಯಾಂಕ್ಸ್ ತೆಗೆದುಕೊಳ್ಳಬೇಕಾದರೆ ಸರ್ಕಾರದ ಧೋರಣೆ ಹಾಗಿಲ್ಲ ಎಂದು ಉತ್ತರ ಕೊಡುತ್ತಾರೆ. ಅನೇಕ ಕೊಕ್ಕೆಗಳನ್ನು ಹಾಕಿ ಯಾವ ಕೆರೆಯೂ ಆಗದಂತೆ ಮಾಡುವುದು ಇಂಜಿನೀಯರರ ಸ್ವಾಭಾವಿಕವಾಗಿದೆ. ಪರ್ಕೋಲೇಷನ್ ಟ್ಯಾಂಕ್ ಆಗಬೇಕು, ಏಕೆಂದರೆ ಅದರ ಕೆಳಗಿರುವ ಬಾವಿಗಳಿಗೆ ಸಾಕಷ್ಟು ನೀರು ಒದಗಿ, ಅದರಿಂದ ಅತ್ಯಂತ ಉಪಯುಕ್ತವಾದ ಕೆಲಸವಾಗುತ್ತದೆ ಮತ್ತು ಬಹಳ ಜನಕ್ಕೆ ಕೆಲಸ ಒದಗಿಸಿದಂತಾಗುತ್ತದೆ. ಪರ್ಕೋಲೇಷನ್-ಕಂ-ಇರ್ರಿಗೇಷನ್ ಟ್ಯಾಂಕ್ಸ್‌ನಂತಹ ಉಪಯುಕ್ತವಾದ ಕ್ರಮವನ್ನು ಕೈಗೊಳ್ಳಬೇಕು. ಸರ್ಕಾರದವರು ಹಳ್ಳಗಳಿಗಾಗಲಿ, ಹೊಳೆಗಳಿಗಾಗಲಿ ಬ್ರಿಡ್ಜನ್ನು ಕಟ್ಟಿಸುತ್ತಾರೆ. ಬ್ರಿಡ್ಜ್ ಕಂ ಪಿಕಪ್‌ನಿಂದ ಬೇಸಿಗೆಯಲ್ಲಿ ನೀರು ಹಿಡಿದು, ಅದನ್ನು ಡೈವರ್ಟ್ ಮಾಡಿ ನೀರಾವರಿಗೆ ಉಪಯೋಗವಾಗುವಂತೆ ಒಂದು ಯೋಜನೆ ಮಾಡಬೇಕು. ದುಡ್ಡು ಖರ್ಚು ಮಾಡಿ ಬ್ರಿಡ್ಜ್ ಕಟ್ಟಿಸುತ್ತಾರೆ ಇದರ ಜೊತೆಗೆ ನೀರಾವರಿ ಅಭಿವೃದ್ಧಿಯನ್ನೂ ಕೈಗೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಬೋರಿಂಗ್ ಮೆಷಿನ್ ವಿಷಯ. ಇದರ ಬಗ್ಗೆ ಅನೇಕ ಸಲ ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಬೋರಿಂಗ್ ಮಿಷನ್ ನಮ್ಮ ತಾಲ್ಲೂಕಿನಲ್ಲಿ ಸಾಕಷ್ಟು ಇಲ್ಲ. ಸರ್ಕಾರದವರು ಸಾಕಷ್ಟು ಬೋರಿಂಗ್ ಮಿಷನ್ ತರಿಸಿ ಎಲ್ಲಾ ಕಡೆಯೂ ಒದಗಿಸಿ ಬಾವಿಗಳನ್ನು ಆಳವಾಗಿ ಮಾಡಬೇಕು. ಬ್ಲಾಸ್ಟಿಂಗ್ ಮಿಷನ್‌ಗಳನ್ನು ತರಿಸಿದ್ದಾರೆ. ಇದು ರಾಕ್ ಇದ್ದಲ್ಲಿ ಬಾವಿಗಳನ್ನು ಬಹಳ ಆಳವಾಗಿ ಮಾಡಲು ಉಪಯೋಗಕ್ಕೆ ಬರುತ್ತದೆ. ಇದರಿಂದ ಹೆಚ್ಚು ಪ್ರಯೋಜನವಾಗುತ್ತದೆ. ಇವುಗಳನ್ನು ಸರ್ಕಾರದವರು ರೈತನಿಗೆ ಒದಗಿಸಿ ಹೆಚ್ಚು ಉಪಯೋಗವಾಗುವ ಹಾಗೆ ಕೆಲಸ ಮಾಡಬೇಕು.

ಅನೇಕ ಕಡೆ ರೈತನಿಗೆ ಸಾಲ ಸರಿಯಾಗಿ ಕೊಡುತ್ತಾ ಇಲ್ಲ. ಅನೇಕ ತೊಂದರೆಗಳು ಬರುತ್ತವೆ. ವತನದಾರ ಜಮೀನುಗಳ ಮೇಲೆ ಸಾಲ ಕೊಡುವುದಕ್ಕೆ ತೊಂದರೆಯಾಗಿದೆ. ಬರಗಾಲ ಪ್ರದೇಶದಲ್ಲಿ ಯಾವ ರೀತಿ ರೈತಾಪಿ ಜಮೀನಿಗೆ ಭೂಸುಧಾರಣೆ ಅಭಿವೃದ್ಧಿಗಾಗಿ ಮತ್ತು ಬಾವಿಗಳನ್ನು ತೆಗೆಯುವುದಕ್ಕೆ ಸರ್ಕಾರದವರು ಸಾಲ ಕೊಡುತ್ತಾರೋ, ಅದರಂತೆ, ಈ ಜಮೀನಿಗೂ ಸಾಲ ಕೊಡುವಂತೆ ಮಾಡಿಕೊಡಬೇಕು. ಇದಕ್ಕೆ ಯಾವ ತರಹ ತೊಂದರೆಯೂ ಇರಬಾರದು.

ಇನ್ನು ಅಭಾವದ ಪ್ರದೇಶದಲ್ಲಿ ಗಂಜಿ ಕೇಂದ್ರಗಳನ್ನು ತೆಗೆಯಬೇಕು ಎಂದು ಹೇಳಿದ್ದಾರೆ. ಹಿಂದೆ ಡೋಲ್ಸ್ ಕೊಡುವ ಪದ್ಧತಿ ಇತ್ತು. ಎಲ್ಲಿ ಅನಾಥರು, ನಿರ್ಗತಿಕರು ಇದ್ದಾರೆ ಅಲ್ಲಿ ಗಂಜಿ ಕೇಂದ್ರಗಳನ್ನು ತೆಗೆಯಬೇಕು. ಈ ತುಟ್ಟೀ ಕಾಲದಲ್ಲಿ ಯಾರೂ ಊಟ ಹಾಕುವುದಿಲ್ಲ. ದಾನಧರ್ಮ ಕೊಡುವುದಿಲ್ಲ. ಇದ್ದಲ್ಲೇ ಬಿದ್ದು ಸಾಯುವುದು ನಿಶ್ಚಯ. ಒಬ್ಬರು ಉಪವಾಸದಿಂದ ಸತ್ತರೆ ಇಡೀ ದೇಶದಲ್ಲಿ ಕೋಲಾಹಲ ಏಳುತ್ತದೆ. ಅದಕ್ಕಾಗಿ ಸರ್ಕಾರ ಈಗಿನಿಂದಲೇ ಅಂತಹ ಜನರ ಯೋಗಕ್ಷೇಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಮುಂಬಯಿ ಕರ್ನಾಟಕದಲ್ಲಿ ಬರಗಾಲದಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳುವಾಗ, ಸರ್ಕಾರದವರು ಕೂಲಿಗಾರರಿಗೆ ಕೊಡತಕ್ಕ ಸಂಬಳದಲ್ಲಿ ⅓ ಅಂಶವನ್ನು ಕಟ್ ಮಾಡಿಕೊಡುವ ದುರ್ವ್ಯಾಪಾರದ ಪದ್ಧತಿಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇದನ್ನು ಅನೇಕ ಸಲ ಕಂದಾಯ ಮಂತ್ರಿಗಳ ಲಕ್ಷ್ಯಕ್ಕೆ ತಂದಿದ್ದೇನೆ. ಈ ಬಗ್ಗೆ ಪತ್ರವನ್ನೂ ಬರೆದಿದ್ದೇನೆ. ಇನ್ನು ಯಾವ ತರಹ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದರ ಬಗ್ಗೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಕೆಲಸ ಮಾಡಿವಾಗ ಒಂದು ಕ್ಯೂಬಿಕ್ ಮೀಟರಿಗೆ ರೂ. 1-31 ಪೈಸೆಯಷ್ಟು ಕೊಡಬೇಕು ಎಂದು ಹುಕುಂ ಹೊರಡಿಸಿದ್ದಾರೆ. ಇಂಜನೀಯರ್ಸ್, ಆಫೀಸರ್ಸ್ ಲೆಕ್ಕ ಮಾಡುವಾಗ ಮುರಮು ಇದ್ದಲ್ಲಿ, ಹಾರ್ಡ್‌ರಾಕ್ ಇದ್ದಲ್ಲಿ ಕಟ್ ಮಾಡುತ್ತಾರೆ. ಸರ್ಕಾರ ಹಾಗೆ ಹುಕುಂ ಮಾಡಿಲ್ಲ. ಇದನ್ನು ಸರಿಯಾಗಿ ಖುಲಾಸೆ ಮಾಡಬೇಕು ಎಂದರೆ, ಸರ್ಕಾರದವರು ಸೆಕ್ರೆಟರಿಯನ್ನು ಕೇಳುತ್ತಾರೆ, ಸೆಕ್ರೆಟರಿ ಡೆಪ್ಯೂಟಿ ಕಮೀಷನರ ರಿಪೋರ್ಟನ್ನು ಕೇಳುತ್ತಾರೆ. ಆ ರಿಪೋರ್ಟ್ ಬರುವುದರೊಳಗೆ ಬಡವನ ಜೀವ ಹೋಗುವ ಪರಿಸ್ಥಿತಿ ಬರುತ್ತದೆ. ಈಗಿನ ಕಾಲದಲ್ಲಿ ಸಂಬಳದಲ್ಲಿ ಕಟ್ ಮಾಡುವುದನ್ನು ಬಿಟ್ಟು ಇನ್ನೂ ಹೆಚ್ಚು ಕೊಡಬೇಕು. ಮೊದಲೇ ತುಟ್ಟಿ. ಇದ್ದುದನ್ನೂ ಕಳೆದುಕೊಂಡರೆ ಮಕ್ಕಳಿಗೆ ಒಂದು ತುತ್ತು ಕೂಳೂ ಸಿಕ್ಕುವುದಿಲ್ಲ. ಈ ಪರಿಸ್ಥಿತಿಯಲ್ಲಿರುವಾಗ ಎರಡನೆಯ ಉತ್ಪನ್ನದ ಭಾಗಗಳು ಕಟ್ ಆಗಿರುವಾಗ ಈ ತರಹ ಪೂರ್ತ ಪಗಾರು ಕೊಡುವುದಲ್ಲದೆ, ಹೆಚ್ಚಿಗೆ ಸಂಬಳ ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಹಳ್ಳದಲ್ಲಿ ಬಿದ್ದ ಮೇಲೆ ಕಲ್ಲು ಹೇರುವ ಪರಿಸ್ಥಿತಿ ಆಗಬಾರದು ಎಂದು ನಾನು ಹೇಳಬಯಸುತ್ತೇನೆ. ಈಗ ಇವರ ಬಗ್ಗೆ ತಾವು ಎಲ್ಲಾ ರೀತಿಯ ಕ್ರಮವನ್ನೂ ಕೈಗೊಳ್ಳಬೇಕು. ಬಡವರು ಆದಷ್ಟು ಬರಗಾಲದಿಂದ ಪಾರಾಗಲಿಕ್ಕೆ ಶಕ್ತಿ ಬರುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

ಶ್ರೀ ಎಂ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ರಾಜ್ಯದಲ್ಲಿ ಉದ್ಭವಿಸಿರುವಂತಹ ಕಠಿಣ ಪರಿಸ್ಥಿತಿಯನ್ನು ಬರಗಾಲ ಪರಿಸ್ಥಿತಿಯನ್ನು ನಾವು ಇವೊತ್ತು ಇಲ್ಲಿ ಚರ್ಚಿಸುತ್ತಿದ್ದೇವೆ. ಇದಕ್ಕೆ ಕಾರಣವೇನೆಂದರೆ ಈಗ ಸುಮಾರು 20 ವರ್ಷಗಳಿಂದಲೂ ಸತತವಾಗಿ ಈ ದೇಶದಲ್ಲಿ ಕಾಂಗ್ರೆಸ್ಸಿನವರ ರಾಜ್ಯಭಾರ ನಡೆಯುತ್ತಿರುವುದೇ ಮುಖ್ಯ ಕಾರಣ, ಕಾಂಗ್ರೆಸ್ಸಿನವರ ಆಡಳಿತದಿಂದ ಮಳೆಯೂ ಕೂಡ ಮುನಿದುಕೊಂಡಿದೆ. ಕಾಂಗ್ರೆಸ್ ಸರ್ಕಾರದವರು ತುಂಗಭದ್ರಾ ಪ್ರಾಜೆಕ್ಟನ್ನು ಕಟ್ಟುತ್ತೇವೆಂದು ಕಟ್ಟಿದರು. ಆ ಪ್ರದೇಶದಲ್ಲಿ ಆ ಪ್ರಾಜೆಕ್ಟಿನಿಂದ ನೀರು ಯಾವ ಭಾಗಕ್ಕೆ ಬೇಕಾಗಿತ್ತೋ ಆ ಭಾಗಕ್ಕೆ ನೀರನ್ನು ಕೊಡದೆ, ಯಾವ ಭಾಗಕ್ಕೆ ನೀರು ಬೇಕಾಗಿಲ್ಲವೋ ಅಲ್ಲಿಗೆ ತುಂಗಭದ್ರಾ ಪ್ರಾಜೆಕ್ಟಿನಿಂದ ನೀರನ್ನು ಕೊಟ್ಟರು. ಇವೊತ್ತು ಅಲ್ಲಿಯ ಕೆಂಪು ಭೂಮಿ, ಹಾಗೂ ಉಸುಗು ಭೂಮಿಗೆ ನೀರನ್ನು ತಂದಿಲ್ಲ, ನೀರನ್ನು ಕೊಟ್ಟಿಲ್ಲ. ಆದರೆ ಕಪ್ಪು ಭೂಮಿಗೆ, ಒಂದು ಮಳೆಯಿಂದ ಬೆಳೆಯನ್ನು ಬೆಳೆದುಕೊಳ್ಳತಕ್ಕ ಆಯಕಟ್ಟು ಪ್ರದೇಶಕ್ಕೆ ನೀರನ್ನು ತಂದುಕೊಟ್ಟಿದ್ದಾರೆ. ನೀರು ಬೇಕಾದ ಜನಗಳಿಗೆ ನೀರನ್ನು ಕೊಡದೆ ಬೇಡವಾಗಿರತಕ್ಕ ಜನಗಳಿಗೆ ಎಲ್ಲಾ ತರಹ ಸವಲತ್ತುಗಳನ್ನ ಈ ಸರ್ಕಾರದವರು ಕೊಟ್ಟರು. ನಾನು ಹೇಳತಕ್ಕಂಥ ವಿಭಾಗದಲ್ಲಿ 25 ಭಾಗ ಶ್ರೀಮಂತರಾಗಿದ್ದರೆ 75 ಭಾಗ ಜನರು, ಬಡವರಾಗಿ ಕಷ್ಟಪಡುತ್ತಿದ್ದಾರೆ. ನಿರುದ್ಯೋಗಿಗಳಾಗಿ ಅವರು ಬೀದಿಯಲ್ಲಿ ತಿರುಗಾಡುತ್ತಿದ್ದಾರೆ. ಇವೊತ್ತು ಅಲ್ಲಿ ಅಂಥಾ ಒಂದು ಪರಿಸ್ಥಿತಿ ಉದ್ಭವಿಸಿದೆ. ಆದಕಾರಣ ಇವೊತ್ತು ದೇಶದಲ್ಲಿ ಇಂಥಾ ಬರಗಾಲ ಪರಿಸ್ಥಿತಿ ಉದ್ಭವಿಸಿದೆ ದೇವರೂ ಕೂಡ ಮುನಿದುಕೊಂಡಿದ್ದಾನೆ ಎಂದು ಹೇಳಬಹುದು.

ಇನ್ನು ಎರಡನೆಯ ವಿಷಯ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ರೆಡ್ ಟೇಪಿಜಮ್ ವಿಚಾರ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಸ್ಕೇರ್ಸಿಟಿ ಕಂಡೀಷನ್ನಿಗೆ ಸಂಬಂಧಪಟ್ಟ ವರದಿಯಲ್ಲಿಯೇ ರೆಡ್ ಟೇಪಿಜಮ್ ಶುರುವಾಗಿದೆ. ಏತಕ್ಕೆಂದರೆ ನಾನು ಇಡೀ ಈ ವರದಿಯನ್ನೆಲ್ಲಾ ಓದಿದ್ದೇನೆ. ಆದರೆ ಇದರಲ್ಲಿ ರಾಯಚೂರು ಜಿಲ್ಲೆಯಲ್ಲಿ ಬರಗಾಲ ಇದೆ ಎನ್ನುವ ಶಬ್ದ ಇದರಲ್ಲಿ ಎಲ್ಲೂ ಇಲ್ಲ. ಇದು ರಾಯಚೂರು ಜಿಲ್ಲೆಯ ಜನಗಳ ದೌರ್ಭಾಗ್ಯ. ಆ ಪ್ರದೇಶದಿಂದ ಪ್ರತಿನಿಧಿಗಳಾಗಿ ಆರಿಸಿ ಬಂದಿರತಕ್ಕ 10 ಜನ ಸದಸ್ಯರ ಪೈಕಿ 7 ಜನ ಸದಸ್ಯರು ಕಾಂಗ್ರೆಸ್ ಸದಸ್ಯರು. ಹಾಗು ಶ್ರೀಮತಿ ಬಸವರಾಜೇಶ್ವರಿ ಉಪಮಂತ್ರಿಯಾಗಿ ಇದ್ದರೂ ಸಹ ರಾಯಚೂರು ಜಿಲ್ಲೆಗೆ ಈ ಒಂದು ಪರಿಸ್ಥಿತಿ ಉಂಟಾಗಿರುವುದು ನಮ್ಮ ದೌರ್ಭಾಗ್ಯ ಎಂದು ಹೇಳಬಹುದು. ತುಂಗಭದ್ರಾ ಕೆನಾಲ್ ಬಗ್ಗೆ ಒಂದು ವಿಷಯವನ್ನು ಹೇಳಬೇಕಾಗಿದ್ದರೆ, ತುಂಗಭದ್ರಾ ಆಯಕಟ್ಟಿನಲ್ಲಿರತಕ್ಕ 5,80,000 ಎಕರೆ

(ಶ್ರೀ ಎಂ. ನಾಗಪ್ಪ)

ಜಮೀನಿನ ಪೈಕಿ 1 ಅಥವಾ 1½ ಲಕ್ಷ ಎಕರೆ ಜಮೀನು ನೀರಾವರಿಯಾಗಿದೆ, ಡೆವಲಪ್ ಆಗಿದೆ. ಉಳಿದ ನೀರಿನಿಂದ ಯಾವ ಉಪಯೋಗವನ್ನೂ ಹೊಂದಿಲ್ಲ. ಉಳಿದ ಜಮೀನೂ ಡೆವಲಪ್ ಆಗಿಲ್ಲ. ತುಂಗಭದ್ರಾ ಪ್ರಾಜೆಕ್ಟಿನಿಂದ ಯಾವ ಭಾಗಕ್ಕೆ ನೀರನ್ನು ಕೊಡಬೇಕಾಗಿತ್ತೋ ಆ ಭಾಗಕ್ಕೆ ಕೊಟ್ಟಿಲ್ಲ. ಲಿಂಗ್‌ಸುಗೂರ್, ಕಷ್ಟಗಿ, ಯಲಬುರ್ಗಿ, ದೇವದುರ್ಗ, ರಾಯಚೂರು ಈ ಪ್ರದೇಶಗಳಲ್ಲಿ ಪರಿಸ್ಥಿತಿ ತೀರ ಹದಗೆಟ್ಟಿದೆ. ಅಲ್ಲಿಯ ಕೆಲವು ಭಾಗಗಳಲ್ಲಿ ಹೈವೇ ರಾಬರೀಸ್ ಕೂಡ ನಡೆದಿದೆ. ನಮ್ಮ ರಾಯಚೂರು ಜಿಲ್ಲೆಯ ಪರಿಸ್ಥಿತಿ ಈ ವರದಿಯಲ್ಲಿ ಕಾಣಿಸದೇ ಇರುವುದು ಬಹಳ ಶೋಚನೀಯ. ಈಗಾಗಲೇ ಇಲ್ಲಿಂದಲೇ ರೆಡ್ ಟೇಪಿಜಂ ಶುರು ಆಯಿತು.

ಇನ್ನೊಂದು ವಿಷಯ. ಕೆಲವು ಮಾಹಿತಿಗಳನ್ನು ಈಗ ಇಲ್ಲಿ ನಾನು ಹೇಳುತ್ತೇನೆ. ಅಭಾವ ಪರಿಸ್ಥಿತಿಯ ಬಗ್ಗೆ ರಿಲೀಫ್ ವರ್ಕ್ಸ್ ಮಾಡಿಸುವುದಕ್ಕೋಸ್ಕರ ಒಟ್ಟು ನಮ್ಮ ರಾಜ್ಯದಲ್ಲಿ ಒಂದು ಕೋಟಿ 80 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಒದಗಿಸಿದ್ದಾರೆ. ಅದರಲ್ಲಿ ಬೆಂಗಳೂರು ಡಿವಿಜನ್ನಿಗೆ 43½ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮೈಸೂರು ಡಿವಿಜನ್ನಿಗೆ 32½ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಗುಲ್ಬರ್ಗಾ ಡಿವಿಜನ್ನಿಗೆ ಮಾತ್ರ 13·14 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಬೆಳಗಾಮ್ ಡಿವಿಜನ್ನಿಗೆ 17·13 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಡೀ ಮೈಸೂರು ರಾಜ್ಯದಲ್ಲಿ ನಮ್ಮ ರಾಯಚೂರು ಜಿಲ್ಲೆ ವಿಸ್ತೀರ್ಣದಲ್ಲಿ 3ನೇ ಜಿಲ್ಲೆ. ಈ ವಿಭಾಗಕ್ಕೆ 14 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎಲ್ಲಕ್ಕಿಂತ ದೊಡ್ಡ ಜಿಲ್ಲೆಯಾದ ಬಿಜಾಪುರ ವಿಭಾಗಕ್ಕೆ 17 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಬಹಳ ವಿಸ್ತಾರವಾದಂತಹ ರಾಯಚೂರು ಜಿಲ್ಲೆಗೆ ಗುಲಬರ್ಗಾ ಮತ್ತು ಬೀದರ್ ಜಿಲ್ಲೆಗಳಿಗೆ ಒಟ್ಟುಗೂಡಿಸಿ 13½-14 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಂಥಾ ಪರಿಸ್ಥಿತಿಯಲ್ಲಿ ಯಾವ ದೃಷ್ಟಿಯಿಂದ ನೀವು ನಮ್ಮ ಜಿಲ್ಲೆಗಳಿಗೆ ಸಹಕಾರ ಮಾಡುತ್ತೀರಿ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ತುಂಗಭದ್ರಾ ಪ್ರಾಜೆಕ್ಟಿನ ಬಗ್ಗೆ ಯಾವ ರೀತಿ ಮಾಡಿದರು ಎಂಬುದನ್ನು ತಾವು ದಯವಿಟ್ಟು ನೋಡಬೇಕು. ರಾಯಚೂರಿನಲ್ಲಿ ಟ್ಯಾಂಕುಗಳಿಂದ 5,767 ಎಕರೆ ಜಮೀನು ಇರಿಗೇಟ್ ಆಗುತ್ತಿದೆ. 2,460 ಹೆಕ್ಟಾರ್ ಜಮೀನು ಬಾವಿಗಳಿಂದ ಇರಿಗೇಟ್ ಆಗುತ್ತದೆ. ಕೋಲಾರ ಜಿಲ್ಲೆಯಲ್ಲಿ 12 ಸಾವಿರ ಪಂಪುಸೆಟ್ಟುಗಳನ್ನು ಹಾಕಿಸಿದ್ದಾರೆ. ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ 2 ಸಾವಿರ ಪಂಪುಸೆಟ್ಟುಗಳು ಇವೆ. ಬೇರೆ ಜಿಲ್ಲೆಗಳಿಗೆ ಹೆಚ್ಚು ಕೊಡಬಾರದು ಎಂದು ನನ್ನ ಉದ್ದೇಶವಲ್ಲ. ಕೋಲಾರ ಜಿಲ್ಲೆಗೂ ಕೊಡಿ, ಬೆಂಗಳೂರು ಜಿಲ್ಲೆಗೂ ಕೊಡಿ, ಮೈಸೂರು ಜಿಲ್ಲೆಗೂ ಕೊಡಿ. ಆದರೆ ನಾನು ಹೇಳುವುದು ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳನ್ನು ಕನಿಷ್ಠ ರೀತಿಯಲ್ಲಿ ನೋಡಿದ್ದಾರೆ. ನಮ್ಮ ರಾಯಚೂರು ಜಿಲ್ಲೆಯಲ್ಲಿ ಬಹಳ ಕಠಿಣ ಪರಿಸ್ಥಿತಿ ಇದೆ. ಅದನ್ನು ಸರ್ಕಾರದವರು ಗಮನಿಸಿಲ್ಲ. ರಾಯಚೂರು ಜಿಲ್ಲೆಯನ್ನು ಗುಲ್ಬರ್ಗಾ ಜಿಲ್ಲೆಗೆ ಹೋಲಿಸಿ ನೋಡಿದರೂ ನಮಗಿಂತ ಅದು ಉತ್ತಮವಾಗಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ 12 ಸಾವಿರ ಹೆಕ್ಟಾರ್ ಟ್ಯಾಂಕ್ ಕೆಳಗಡೆ ಇರಿಗೇಟ್ ಆಗುತ್ತಿದೆ. 18 ಸಾವಿರ ಹೆಕ್ಟಾರ್ ಜಮೀನು ಬಾವಿಯಿಂದ ಇರಿಗೇಟಾಗುತ್ತಿವೆ. ಕುಷ್ಟಗಿ, ಯಲಬುರ್ಗಿ, ದೇವದುರ್ಗ, ಲಿಂಗ್‌ಸುಗೂರ್ ಮತ್ತು ರಾಯಚೂರು ಈ 5 ತಾಲ್ಲೂಕುಗಳು ಬಹಳ ಕಠಿಣ ಪರಿಸ್ಥಿತಿಯಲ್ಲಿವೆ. ಅಲ್ಲಿ ಕೆಂಪು ಭೂಮಿ, ಉಸುಗು ಭೂಮಿ ಇದೆ. ಅಲ್ಲಿಗೆ ಈ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ನೀರನ್ನು ಒದಗಿಸಿಲ್ಲ, ಯಾವ ತರದ ನೀರಾವರಿ ಮಾಡಿಕೊಟ್ಟಿಲ್ಲ. ಅಲ್ಲಿ ಸಾಕಷ್ಟು ಕಾಮಗಾರಿ ಕೆಲಸಗಳನ್ನೂ ಸರ್ಕಾರದವರು ಕೈಗೊಂಡಿಲ್ಲ. ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ನಾನು ಕಾರಿನಲ್ಲಿ ಹೋಗುತ್ತಾ ನೋಡಿದೆ. 64-65 ಮೈಲ ಬಂಡಿಂಗ್ ವರ್ಕ್ಸ್ ಆಗಿದೆ. ನಮ್ಮ ರಾಯಚೂರು ಜಿಲ್ಲೆಯಲ್ಲಿ ಸಾಕಷ್ಟು ಬಂಡಿಂಗ್ ವರ್ಕ್ಸ್ ನಡೆದಿಲ್ಲ. ನಮ್ಮ ಜಿಲ್ಲೆಯಲ್ಲಿ ಕೆಂಪು ಸಾಯಿಲ್ ಇದೆ. ದೇವದುರ್ಗ, ಯಲಬುರ್ಗಿ, ಕುಷ್ಟಗಿ, ಲಿಂಗ್‌ಸುಗೂರ್, ರಾಯಚೂರು ಈ ತಾಲ್ಲೂಕುಗಳಲ್ಲಿ ಕೆಂಪು ಸಾಯಿಲ್ ಇದೆ. ಈ ಪ್ರದೇಶಗಳಲ್ಲಿ ಎಷ್ಟು ಬಂಡಿಂಗ್ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಅಷ್ಟು ಬಂಡಿಂಗ್ ಕೆಲಸಗಳನ್ನು ತೆಗೆದುಕೊಂಡಿಲ್ಲ. ಈ ಕಾಂಗ್ರೆಸ್ ಸರ್ಕಾರ ಪಕ್ಷಪಾತ ದೃಷ್ಟಿಯಿಂದ ನೋಡುತ್ತಿದೆ. ರಾಯಚೂರು ಜಿಲ್ಲೆ ಬರಗಾಲ ಪೀಡಿತವಾಗಿದೆ. ಈ ಜಿಲ್ಲೆಗೆ ಕಾಂಗ್ರೆಸ್ ಸರ್ಕಾರದವರು ಎಷ್ಟು ಕೆರೆಗಳನ್ನು ಕೊಟ್ಟಿದ್ದಾರೆ, ಎಷ್ಟು ಬಾವಿಗಳನ್ನು ಕೊಟ್ಟಿದ್ದಾರೆ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಸದಸ್ಯರು ಹೈದರಾಬಾದ್ ಕರ್ನಾಟಕದಿಂದ ಬಂದಿದ್ದಾರೆ. ಅವರು ಬರೀ ರಾಯಚೂರು ಜಿಲ್ಲೆಯಲ್ಲಿ ಮಾತ್ರ ಬರಗಾಲ ಇದೆ ಎಂದು ಹೇಳುತ್ತಿದ್ದಾರೆ. ಈ ಬರಗಾಲ ನಮ್ಮ ತಾತ ಮುತ್ತಾತನ ಕಾಲದಿಂದಲೂ ಮೈಸೂರು ಜಿಲ್ಲೆಯಲ್ಲಿ ಬರುತ್ತಿದೆ. ಈ ಬರಗಾಲವನ್ನು ಹೋಗಲಾಡಿಸುವುದಕ್ಕೆ ಏನು ಪ್ರಯತ್ನ ಮಾಡಬೇಕು ಅದನ್ನು

ಮಾಡುವುದಿಲ್ಲ. ಕೋಲಾರ ಜಿಲ್ಲೆಗೆ 12 ಸಾವಿರ ಪಂಪುಸೆಟ್ಟುಗಳನ್ನು ಕೊಟ್ಟಿದ್ದಾರೆ ಎಂದರೆ ಎಷ್ಟೋ ವರ್ಷಗಳಿಂದ ಅವರು ಆ ಪಂಪು ಸೆಟ್ಟುಗಳನ್ನು ಹಾಕಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈಗ ಈ ಮಾನ್ಯ ಸದಸ್ಯರ ಅನಾಲಜಿ ಹೇಗಿದೆ ಎಂದರೆ ಈಗ ನಾನು ದಪ್ಪನಾಗಿದ್ದೇನೆ, ಅವರು ತೆಳುವಾಗಿದ್ದಾರೆ, ಕುಳ್ಳಾಗಿದ್ದಾರೆ. ಅವರು ನನ್ನ ಹಾಗೆ ದಪ್ಪನಾಗಿ ಆಗುವವರೆಗೂ ನಾನು ಉಪವಾಸ ಇರಬೇಕು ಎಂದು ಹೇಳಿದಹಾಗೆ ಆಗುತ್ತದೆ. ಅವರು ನನ್ನ ಹಾಗೆ ದಪ್ಪನಾಗಿ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ನಾನು ಹುಟ್ಟಿರುವುದೇ ಹೀಗೆ, ಅವರು ಹುಟ್ಟಿರುವುದೇ ಹಾಗೆ. ಇದಕ್ಕೆ ಒಂದು ಗಾದೆ ಇದೆ. 'ರಾಮ ರಾಮ ಹೊಟ್ಟೆ ದುಬ್ಬಣ್ಣ ಕೈ ಕಾಲು ಸಣ್ಣ' ಎಂದು ಹೇಳುವಂತೆ ಆಗಿದೆ. ಎಲ್ಲಿ ಅಭಿವೃದ್ಧಿ ಕೆಲಸಗಳು ಹಾಗೂ ಬರಗಾಲದ ಕೆಲಸಗಳು ಬೇಕೋ ಅಲ್ಲಿ ಆಗದೇ ಎಲ್ಲಿ ಹೆಚ್ಚಾಗಿ ಅಭಿವೃದ್ಧಿಯಾಗಿರುವ ಸ್ಥಳಗಳಲ್ಲೇ ಹೆಚ್ಚು ಪರಿಹಾರ ಕಾಮಗಾರಿ ಕೆಲಸಗಳನ್ನು ಮಾಡುತ್ತಾ ಹೋದರೆ ನಮ್ಮ ಮೈಸೂರು ಜಿಲ್ಲೆಯಲ್ಲಿ ಬರಗಾಲಕ್ಕೆ ತುತ್ತಾಗಿರುವ ಭಾಗಗಳ ಜನರು ಉಪವಾಸ ಇರಬೇಕೆಂದು ತಮ್ಮ ಅಭಿಪ್ರಾಯದ ಅರ್ಥವೋ ಹೇಗೆ ಎನ್ನುವುದು ಸರಿಯಾಗಿ ಗೊತ್ತಾಗುತ್ತಿಲ್ಲ.

ಶ್ರೀ ಎಂ. ನಾಗಪ್ಪ.—ಮಾನ್ಯ ಸದಸ್ಯರು ನಾನು ಹೇಳಿದುದನ್ನು ಅಪಾರ್ಥ ಮಾಡಿಕೊಂಡಂತೆ ತೋರುತ್ತೆ. ಇಲ್ಲಿ ಬರಗಾ ದ ಪರಿಸ್ಥಿತಿ ವಿಚಾರವಾಗಿ ಹೇಳುವಾಗ ಎಲ್ಲಿ ಬರಗಾಲ ಹೆಚ್ಚಾಗಿದೆಯೋ ಅಂತಹ ಕಡೆಗಳಲ್ಲಿ ಹೆಚ್ಚು ಸಹಾಯವಾಗುತ್ತಿಲ್ಲ. ಎಲ್ಲಿ ಇಲ್ಲವೋ ಅಂತಹ ಕಡೆಗಳಲ್ಲಿ ಹೆಚ್ಚು ಕೆಲಸಗಳು ಆಗುತ್ತಿವೆ. ಸುಮಾರು ಎರಡು ಪ್ಲಾನುಗಳನ್ನು ಮಾಡಿದರೂ ಬರಗಾಲದ ಸ್ಥಿತಿ ಒಂದೇ ರೀತಿಯಾಗಿಯೇ ಇದೆ. ನಾನು ಹೇಳುತ್ತಿರುವುದು ದೇಶದ ಎಲ್ಲಾ ಭಾಗದಲ್ಲೂ ಬರಗಾಲದ ಸ್ಥಿತಿ ಎಲ್ಲೆಲ್ಲಿ ಇದೆಯೋ ಅಲ್ಲಿಗೆಲ್ಲಾ ಪೂರ್ಣವಾಗಿ ಸರಕಾರ ಸಹಾಯ ಸಹಕಾರಗಳನ್ನು ಕೊಡಬೇಕು. ಉದಾಹರಣೆಯಾಗಿ ಚಿತ್ರದುರ್ಗದಲ್ಲಿ ಕ್ಷಾಮ ಬಂದಿದೆ ಇಲ್ಲಿ ಹೆಚ್ಚು ಹಣಕೊಟ್ಟು ಪಂಪುಸೆಟ್ಟುಗಳು ಹೆಚ್ಚಾಗಿ ಕೊಡಬೇಕು. ಈಗ ಕೊಡುವುದಕ್ಕಿಂತ ಇನ್ನೂ ಹೆಚ್ಚು ಹೆಚ್ಚಾಗಿ ಕೊಡಬೇಕು. ಇದನ್ನು ಬೇಡ ಎಂದು ಹೇಳುತ್ತಿಲ್ಲ. ಆದರೆ ಇಂದು ಕಾಂಗ್ರೆಸ್ ಸರಕಾರ ಬಂದ ಮೇಲೆ ಯಾವ ರೀತಿ ಬರಗಾಲದ ಕೆಲಸಗಳು ಎಲ್ಲೆಲ್ಲಿ ಉದ್ಭವವಾಗಿದೆ ಎಂದು ನೋಡುವಾಗ ಸರಕಾರ ಕೊಡುವ ಹಣ ಸರಿಯಾಗಿ ಉಪಯೋಗವಾಗುತ್ತಿಲ್ಲ. ಮೂರನೇ ಯೋಜನೆಯೊಳಗೇನೆ ನಾವು ಇಷ್ಟು ಕಡೆಗಳಲ್ಲಿ ನದಿಗಳಿಗೆ ಅಣೆಕಟ್ಟೆಗಳನ್ನು ಕಟ್ಟುತ್ತೇವೆ, ಇಷ್ಟು ನೀರಾವರಿಯೋಜನೆಗಳನ್ನು ಮಾಡುತ್ತೇವೆ, ಇಷ್ಟು ಬಾವಿಗಳನ್ನು ಮಾಡುತ್ತೇವೆ ಎಂದು ಹೇಳಿದರೂ ಇದುವರೆಗೂ ಯಾವುದೂ ಕಾರ್ಯರೂಪಕ್ಕೆ ಬರಲಿಲ್ಲ. ನಮ್ಮ ಬರಗಾಲ ಹೆಚ್ಚಾಗುತ್ತಲೇ ಇದೆ. ಇದಕ್ಕೇನು ಮಾಡುವುದು ಎಂದು ಇಲ್ಲಿ ಹೇಳಬೇಕಾಗಿದೆ. ನೀವು ಮಾಡುವ ಕೆಲಸದಿಂದ ಏನೂ ಪ್ರಯೋಜನವಾಗುತ್ತಿಲ್ಲ. ನಮ್ಮ ರಾಯಚೂರು ಜಿಲ್ಲೆ ಬಗ್ಗೆ ಹೇಳುವಾಗ ಸರಕಾರ ನಮಗೆ ಯಾವಾಗಲೂ ತುಂಗಭದ್ರಾ ಪ್ರಾಜೆಕ್ಟನ್ನು ನಮ್ಮ ಮುಂದೆ ಹೇಳುತ್ತಾರೆ ಆದರಿಂದ ಎಲ್ಲಿಗೆ ನೀರು ಕೊಡಬೇಕು ಎನ್ನುವುದರ ಬಗ್ಗೆ ಸರಿಯಾಗಿ ನೋಡಿಕೊಡುತ್ತಿಲ್ಲ. ಉದಾಹರಣೆಯಾಗಿ ಹೇಳಬೇಕಾದರೆ ತುಂಗಭದ್ರಾ ಕಾಲುವೆಯ ಎಡ ಭಾಗಕ್ಕಿರುವ ಚಂದ್ರಬಂಡಾ ಹಾಗೂ ಎಡಗೆಲಾ ಇದರ ಪಕ್ಕದಲ್ಲಿ ಮಳೆಯೇ ಇಲ್ಲದ ಕಾರಣ ಇಲ್ಲಿರುವ ಹಳ್ಳಿಗಳ ಜನರಿಗೆ ಕುಡಿಯಲೂ ನೀರೇ ಸಿಗುತ್ತಿಲ್ಲ, ಇದನ್ನು ನೋಡಬೇಕಾದರೆ ಯಾರಾದರೂ ಜನವರಿ ಹಾಗೂ ಫೆಬ್ರವರಿ ತಿಂಗಳಲ್ಲಿ ಇಲ್ಲಿಗೆ ಬಂದು ನೋಡಿದರೆ ಅದು ಅವರಿಗೇನೇ ಚೆನ್ನಾಗಿ ಅರ್ಥವಾಗುತ್ತದೆ. ಆದರಲ್ಲೂ ಷೋಲಾಪುರದಲ್ಲಿರುವ ಮಿಲ್ಲುಗಳಲ್ಲಿ ಈ ಭಾಗದ ಜನರು ಹೋಗಿ ಕೆಲಸ ಮಾಡುತ್ತಿರುತ್ತಾರೆ. ಇಲ್ಲಿನ ಹಳ್ಳಿಯ ಜನರು ಜನವರಿ ಹಾಗೂ ಫೆಬ್ರವರಿ ತಿಂಗಳಲ್ಲಿ ಬರಗಾಲಕ್ಕೆ ತುತ್ತಾಗಿ ಅವರ ಮನೆಗಳಿಗೆ ಪೂರ್ತಿ ಬೀಗ ಹಾಕಿ ಬೇರೆ ಕಡೆಗೆ ಕೆಲಸಕ್ಕೆ ಹೋಗುತ್ತಾರೆ. ಬೊಂಬಾಯಿಯಲ್ಲಿ ಬೇಕಾದರೆ ಹೋಗಿ ಅಲ್ಲಿಯ ಅಂಕೆ ಸಂಖ್ಯೆಗಳನ್ನು ನೋಡುವುದಾದರೆ, ರಾಯಚೂರು ಜಿಲ್ಲೆಯವರೇ ಹೆಚ್ಚಾಗಿ ಕೆಲಸಕ್ಕೆ ಹೋಗಿರುವುದು ಕಂಡು ಬರುತ್ತದೆ. ರಾಜೋಲಬಂಡದ ಕಾಲುವೆ ಪಕ್ಕದಲ್ಲಿ ಸುಮಾರು ಐದಾರು ಹಳ್ಳಿಗಳು ಇವೆ. ಆ ಗ್ರಾಮದ ಜಮೀನುಗಳಿಗೆ ಹಳೆಯ ಬಿಚ್ಚಾಲಿ ಕಾಲುವೆಯಿಂದ ನೀರನ್ನು ಒದಗಿಸಲಾಗುತ್ತಿದೆ. ಆದರೆ ಸರಕಾರಕ್ಕೆ ಅದನ್ನು ರಾಜಲ ಬಂಡ ಮೇನ್‌ಕೆನಾಲಿಂದ ನೀರು ಕೊಡಲು ಕೇಳಿದರೂ, ಅದನ್ನು ಸರಿಯಾಗಿ ಪರಿಶೀಲಿಸುತ್ತಿಲ್ಲ ಇಲ್ಲಿಯ ಜನರಿಗೆ ಬಹು ಕಷ್ಟವಾಗಿದೆ ಇವರ ಬಗ್ಗೆ ಸರಕಾರ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಮತ್ತು ಯಾವ ಪರಿಹಾರದ ಕಾರ್ಯಕ್ರಮಗಳನ್ನೂ ಇಲ್ಲಿ ತೆಗೆದುಕೊಂಡಿಲ್ಲ. ಯಾವಾಗ ಕೇಳಿದರೂ ನಮಗೆ ತುಂಗಭದ್ರಾ ಪ್ರಾಜೆಕ್ಟು ಮಾಡಿದ್ದೇವೆ ಎಂದು ನಮ್ಮ ಮುಂದೆ ಹೇಳುತ್ತಾರೆ ಇದರಿಂದ ಇಲ್ಲಿನ ಜನಕ್ಕೆ ಯಾವ ರೀತಿಯ ಪ್ರಯೋಜನವಾಗಿದೆ ಎನ್ನುವುದರ ಬಗ್ಗೆ ನಾನು ಇಲ್ಲಿನ ಯರಗೇರಾ ಹೋಬಳಿ 40 ಹಳ್ಳಿಗಳ ಬಗ್ಗೆ ಸರಕಾರದ ಗಮನಕ್ಕೆ ಹೇಳಬೇಕಾಗಿ ಬಂದಿದೆ. ಇದಕ್ಕಾಗಿ ತುಂಗಭದ್ರಾ ಕಾಲುವೆಯಿಂದ ಸರಿಯಾಗಿ ನೀರು ಸಹಾ ಬರುವುದಿಲ್ಲ ಮತ್ತು ಅಪ್ಪರ್ ಕೃಷ್ಣಾ ಯೋಜನೆ ಮಾಡುತ್ತೇವೆ ಎಂದು

(ಶ್ರೀ ಎಂ. ನಾಗಪ್ಪ)

ಹೇಳುತ್ತಾರೆ. ಇದರಿಂದಲೂ ಮುಂದೆ ನೀರು ಈ ಭಾಗಕ್ಕೆ ಸಿಗುತ್ತೊ ಇಲ್ಲವೋ ಎನ್ನುವ ವಿಚಾರವೂ ಇದೆ ನಾನು ಹೇಳುವುದು ಹಿಂದೆ ಹೇಳಿದಂತೆ 40 ಹಳ್ಳಿಗಳ ಜನಕ್ಕೆ ಎರಗೆರ ಹಾಗೂ ಚಂದ್ರಬಂಡ ಪಕ್ಕದಲ್ಲಿರುವ ಭಾಗಕ್ಕೆ ಸಾಕಷ್ಟು ನೀರು ಸಿಗುವ ವ್ಯವಸ್ಥೆ ಮಾಡಬೇಕಾದರೆ ಅಪ್ಪರ್ ಕೃಷ್ಣ ಯೋಜನೆಯನ್ನು ತೀವ್ರವಾಗಿ ಮಾಡದೇ ಇದ್ದರೆ ಅದರಿಂದೇನೂ ಲಾಭವಾಗುವುದಿಲ್ಲ. ಇದನ್ನು ಬೇಗ ಮಾಡಿದರೆ ಇಲ್ಲಿನ ಕ್ಷಾಮದ ಪರಿಸ್ಥಿತಿಯನ್ನು ನಿವಾರಣೆ ಮಾಡಲು ಅನುಕೂಲವಾಗುತ್ತದೆ. ಪ್ರತಿವರ್ಷವೂ ಇಲ್ಲಿ ಬರಗಾಲ ಬರುತ್ತಲೇ ಇದೆ. ಸುಮಾರು 20 ವರ್ಷಗಳಿಂದಲೂ ಇದನ್ನು ಸರಕಾರಕ್ಕೆ ಹೇಳುತ್ತಲೇ ಬರುತ್ತಿದ್ದೇವೆ. ಇದಕ್ಕಾಗಿ ಈ ಹಳ್ಳಿಗಳಿಗೆ ಅದಷ್ಟು ಹೆಚ್ಚು ಬಾವಿಗಳನ್ನ ಇಲ್ಲಿ ತೆಗೆಸಿಕೊಡುವ ವ್ಯವಸ್ಥೆ ಮಾಡಬೇಕು. ಆದರೆ ಈಗಾಗಲೇ ಸರಕಾರ ನಮ್ಮ ಈ ಭಾಗಕ್ಕೆ ಪಂಪುಸೆಟ್ಟುಗಳನ್ನು ಮಂಜೂರು ಮಾಡಿದ್ದಾರೆ. ಆದರೆ ಅದು ಈಗ ಲ್ಯಾಂಡ್ ಡೆವಲಪ್‌ಮೆಂಟು ಬ್ಯಾಂಕು ಮೂಲಕ ತೆಗೆಯಬೇಕು ಎಂದು ಹೇಳುತ್ತಿದ್ದಾರೆ. ಅಲ್ಲದೆ ನಮ್ಮಲ್ಲಿ ಬರಗಾಲದ ಪ್ರದೇಶಗಳ ಜನರಿಗೆ ಜೋಳ ಕೂಡ ಸರಿಯಾಗಿ ಕೊಡುತ್ತಿಲ್ಲ. ಸರಕಾರ ಜೋಳವನ್ನು 52 ರೂ. ನಂತೆ ರೇಟು ನಿಗದಿ ಮಾಡಿದ್ದಾರೆ. ಇದೇ ದರದಲ್ಲಿ ಬರಗಾಲದಲ್ಲಿ ಕೆಲಸ ಮಾಡುವ ಜನಕ್ಕೆ ಕೊಡುತ್ತಿಲ್ಲ. ಅವರು ಹೆಚ್ಚು ಬೆಲೆ ಕೊಟ್ಟು ಕೊಂಡುಕೊಳ್ಳಬೇಕಾಗಿದೆ. ಇದು ಹೇಗೆ ಸಾಧ್ಯ ಇದನ್ನು ಯೋಚನೆ ಮಾಡಬೇಕು. ಸರಕಾರದವರು ಬೇಕಾದಷ್ಟು ಮಾತುಗಳನ್ನು ಇಲ್ಲಿ ಹೇಳುತ್ತಾರೆ. ಆದರೆ ಯಾವುದೂ ಸರಿಯಾಗಿ ಕಾರ್ಯಗತವಾಗುತ್ತಿಲ್ಲ. ಇದರಿಂದಾಗಿ ಭೀಕರ ಬರಗಾಲದ ಸ್ಥಿತಿ ಬರುವುದಾಗಿದೆ.

ಇನ್ನೊಂದು ಮುಖ್ಯವಾದ ವಿಚಾರದ ಬಗ್ಗೆ ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳ ಕಡೆಗೆ ಒಂದು ಮನವಿಯನ್ನೂ ಕಳುಹಿಸಿದ್ದೇನೆ. ಅದು ಬಡ್ಜೆಟೆಡ್ ವರ್ಕುಗಳ ಬಗ್ಗೆ ಸರಿಯಾಗಿ ಹಣ ಒದಗಿಸುತ್ತಿಲ್ಲ ಎಂದು. ಕನಿಷ್ಟ ಪಕ್ಷ ಅವರಿಗೆ ಬೇಕಾಗುವಷ್ಟು ಹಣ ಕೊಟ್ಟಿರುವುದನ್ನು ಬೇಗ ಕಳುಹಿಸುವ ವ್ಯವಸ್ಥೆ ಮಾಡಬೇಕು. ಈಗಾಗಲೇ ಲಿಂಗಸೂಗೂರು ಹಾಗು ದೇವದುರ್ಗ ಈ ಭಾಗಗಳಿಗೆ ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಸರಕಾರ ಬಡ್ಜೆಟ್ಟಿನಲ್ಲಿ ಕೆಲವು ಕೆಲಸಗಳಿಗಾಗಿ ಒದಗಿಸಿ ಕೊಡಲಾಗಿದೆ. ಕನಿಷ್ಟಪಕ್ಷ ಈ ಹಣವನ್ನಾದರೂ ತೀವ್ರವಾಗಿ ಈ ಭಾಗಗಳಿಗೆ ಕಳುಹಿಸುವ ವ್ಯವಸ್ಥೆ ಮಾಡಬೇಕು. ಇದರಿಂದ ತುಂಗಭದ್ರಾ ಬಲದಂಡರೆಯಲ್ಲಿರುವ ಲಿಂಗಸೂಗೂರು ಇತ್ಯಾದಿ ಭಾಗಗಳ ಜನಕ್ಕೆ ಸ್ವಲ್ಪವಾದರೂ ಅನುಕೂಲಗಳು ದೊರೆತು ಇಲ್ಲ ಕೆಲಸಗಳನ್ನು ತೀವ್ರವಾಗಿ ಮಾಡಲು ಸಹಾಯವಾಗುತ್ತದೆ. ಇದರ ಕಡೆಗೆ ಮಾನ್ಯ ಮುಖ್ಯ ಮಂತ್ರಿಗಳು ಲಕ್ಷ್ಯ ಕೊಡಬೇಕು ಎಂದು ನಮ್ಮ ಮನವಿಯಲ್ಲೂ ತಿಳಿಸಲಾಗಿದೆ.

ಇನ್ನೊಂದು ವಿಷಯ ಎಂದರೆ ಅದು ನಮ್ಮಲ್ಲಿ ಒಂದು ಹಳೇ ಕೆನಾಲ್ ಇತ್ತು ಮತ್ತು ನಮ್ಮ ರಾಯಚೂರಿನ ತಾಲ್ಲೂಕಿನಲ್ಲಿ ಎರಡು ಕಾಲುವೆಗಳಿವೆ. ಅಲ್ಲದೆ ರಾಜೋಲಿಬಂಡ ಕಾಲುವೆ ಎಂದು ನಮ್ಮ ಕಡೆಯಲ್ಲಿ ಒಂದು ಅಣೆ ಕಟ್ಟಿರುವುದರಿಂದ ಇದರ ಕೆಳಗಿರುವ ಏರಿಯಾಕ್ಕೆ ನೀರು ಕೊಟ್ಟರೂ ಅದು ಸಾಕಾಗುತ್ತಇಲ್ಲ. ಇದು ಸಿಲ್ಟ್ ಅಪ್ ಆಗಿ ಸಂಪೂರ್ಣವಾಗಿ ನೀರು ಬಾರದಂತಾಗಿದೆ. ಇವೊತ್ತಿನ ದಿವಸ ಇದನ್ನು ಇನ್ನೂ ಸ್ವಲ್ಪ ಚೆನ್ನಾಗಿ ಪರೀಕ್ಷೆ ಮಾಡುವ ಪರಿಸ್ಥಿತಿ ಬಂದಿದೆ. ಇದನ್ನು ಸರಕಾರ ಇಲ್ಲಿರುವ ಇಂಜನೀಯರುಗಳ ಮೂಲಕ ಪರಿಶೀಲನೆ ಮಾಡಿ ಇದನ್ನು ಸರಿಪಡಿಸಬೇಕು. ಹಿಂದೆ ಇಲ್ಲಿ ಒಂದು ಹಳೆಯ ಕೆನಾಲ್ ಇತ್ತು ಈಗ ಇದನ್ನು ತೆಗೆದು ಇನ್ನೂ ಎರಡು ಕಾಲುವೆಗಳನ್ನು ಮಾಡಬೇಕೆಂದು ಇದ್ದಾರೆ. ಇದರ ಬಗ್ಗೆ ಸರಕಾರದಲ್ಲಿ ಸ್ಟಾಟಿಸ್‌ಟಿಕ್ಸ್‌ಗಳು ಕೂಡ ಇವೆ. ಯಾವ ಭಾಗದಲ್ಲಿ ಈ ಹಿಂದೆ ಸುಮಾರು ನೂರಾರು ವರ್ಷಗಳಿಂದ ಇಲ್ಲಿ ತರಿ ಬೆಳೆ ಬೆಳೆಯುತ್ತಿದ್ದರೋ ಈ ಭಾಗಕ್ಕೆ ರಾಜಲಬಂಡೆ ಈ ಕಾಲುವೆ ಮಾಡಿದ್ದರೂ ಇದರಿಂದ ನೀರು ಬಾರದಂತಹ ಪರಿಸ್ಥಿತಿ ಬಂದಿದೆ. ಸರಕಾರ ಇದರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಬೇಕು. ರಾಜೋಲಿಬಂಡ ಅಣೆಕಟ್ಟು ಮಾಡಿದ್ದರೂ ಕೂಡ ಇದರಿಂದ ಆಂಧ್ರದವರು ಹೆಚ್ಚು ಉಪಯೋಗ ಪಡೆಯುತ್ತಿದ್ದಾರೆಯೇ ಹೊರತು ನಮ್ಮ ಭಾಗದಲ್ಲಿರುವ ಜನಕ್ಕೆ ಹೆಚ್ಚು ನೀರು ಸಿಗುತ್ತಿಲ್ಲ. ಇದಕ್ಕೇನಾದರೂ ಒಂದು (Escape) Channel ಕಟ್ಟಿ ನೀರು ಸರಿಯಾಗಿ ದೊರಕುವಂತೆ ಮಾಡಬೇಕು ಎಂದು ಇಲ್ಲಿ ಸರಕಾರವನ್ನು ಕೇಳುತ್ತೇನೆ.

ಕೊನೆಯದಾಗಿ ಒಂದು ವಿಚಾರ ಇಲ್ಲಿ ಹೇಳಬೇಕಾಗಿದೆ. ಯಾವ ಯಾವ ಭಾಗದಿಂದ ಇಲ್ಲಿ ಮಂತ್ರಿಗಳಾಗಿ ಬಂದಿರುತ್ತಾರೋ ಅಂತಹವರ ಕ್ಷೇತ್ರಗಳಲ್ಲಿ ಅಲ್ಲಿಗೆ ಬೇಕಾಗುವ ರೋಡುಗಳು ಹಾಗೂ ಪಂಪುಸೆಟ್ಟುಗಳು, ಎಲೆಕ್ಟ್ರಿಸಿಟಿ ಇತ್ಯಾದಿ ಎಲ್ಲ ಸೌಕರ್ಯಗಳನ್ನು ಅಲ್ಲಿನ ಜನಕ್ಕಾಗಿ ಮಾಡುತ್ತಿದ್ದಾರೆ. ಆದರೆ ಎಲ್ಲಿ ಸಾವಿರಾರು ಪಂಪುಸೆಟ್ಟುಗಳು ಬೇಕೆಂದು ಬೇಡಿಕೆಗಳು ಸರಕಾರಕ್ಕೆ ಬಂದಿದ್ದರೂ ಅವು ಅಲ್ಲಿಗೆ ಬೇಗನೆ ಸಿಗುತ್ತಿಲ್ಲ ನಮ್ಮಲ್ಲಿ ಸುಮಾರು 125 ಪಂಪುಸೆಟ್ಟುಗಳನ್ನು ಕೊಡ

ಬೇಕು ಎಂದು ಸರಕಾರದಿಂದ ಮಂಜೂರಾತಿ ಬಂದಿತ್ತು. ಆದರೆ ಇದರ ಮಧ್ಯದಲ್ಲಿ ಸರಕಾರದ ನೀತಿ ಬದಲಾಗಿ ಎಲ್ಲ ಪಂಪುಸೆಟ್ಟುಗಳನ್ನೂ ಆಯಾ ಊರಿನಲ್ಲಿರುವ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಮೂಲಕ ಕೊಡಬೇಕೆಂದು ಮಾಡಿದರು. ಇದರಿಂದ ಈಗ ಪುನಃ ಅಗ್ರಿಕಲ್ಚರು ಡಿಪಾರ್ಟ್‌ಮೆಂಟಿಗೆ ಅರ್ಜಿಗಳನ್ನು ಹಾಕಿದ್ದರು. ಇದರಲ್ಲಿ ಸುಮಾರು 150 ಅರ್ಜಿಗಳನ್ನು ಸರಕಾರದವರು ಮಂಜೂರು ಮಾಡಿದ್ದರೂ ಅವರಿಗೆ ಇನ್ನೂ ಪಂಪುಸೆಟ್ಟುಗಳನ್ನು ಕೊಡುವುದಕ್ಕಾಗಲಿಲ್ಲ. ಏಕೆಂದರೆ ಇವೆಲ್ಲಾ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಪುನಃ ಹೋಗಬೇಕು ಎಂದು ಹೇಳುತ್ತಿದ್ದಾರೆ. ಇದು ಮತ್ತಷ್ಟು ನಿಧಾನವಾಗಲು ಅವಕಾಶವಾಗಿದೆ. ನಾನು ಹಿಂದೆ ಹೇಳಿದ 30-40 ಹಳ್ಳಿಗಳಿಗೆ ಸರಕಾರದವರು ಮಂಜೂರು ಮಾಡಿರುವ ಪಂಪುಸೆಟ್ಟುಗಳಿಂದ ಅನುಕೂಲವಾಗುವುದರಿಂದ ಪುನಃ ಈ ಅರ್ಜಿಗಳನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಹೋಗುವಂತೆ ಮಾಡುವುದು ಸರಿಯಲ್ಲ. ಸರಕಾರ ಯಾವಾಗ ಮೊದಲು ಮಂಜೂರಾತಿ ಕೊಟ್ಟು ಪಂಪುಸೆಟ್ಟುಗಳನ್ನು ಕೊಡಬೇಕೆಂದು ಇದ್ದರೋ ಅಂತಹ ಏರಿಯಾಕ್ಕೆ ಅನುಕೂಲವಾಗುವಂತೆ ಬೇಗನೆ ಪಂಪುಸೆಟ್ಟುಗಳನ್ನು ಹಂಚುವ ವ್ಯವಸ್ಥೆ ಮಾಡಬೇಕು ಮತ್ತು ಈಚೆಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕು ಮುಖೇನ ಕೊಡಬೇಕೆಂದು ಏನು ಒಂದು ಸ್ಕೀಂ ಮಾಡಿದ್ದಾರೆ ಅದನ್ನು ಪ್ರತ್ಯೇಕವಾಗಿ ಹೊಸದಾಗಿ ಬರುವ ಅರ್ಜಿಗಳನ್ನು ಪರಿಶೀಲನೆ ಮಾಡಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುವುದು ಒಳ್ಳೆಯದು ಎಂದು ಹೇಳುತ್ತೇನೆ.

ಆದುದರಿಂದ ನಾನು ಈಗಾಗಲೇ ಮೇಲೆ ಹೇಳಿರುವಂತೆ ನಮ್ಮ ತಂಗಭದ್ರ ಎಡದಂಡೆ ಎಂದರೆ ಚಂದ್ರಬಂಡೆಯ ಪಕ್ಕದಲ್ಲಿರುವ ನಲವತ್ತು ಹಳ್ಳಿಗಳಿಗೆ ಅನುಕೂಲವಾಗಿ ನೀರು ಕೊಡುವ ವ್ಯವಸ್ಥೆ ಕಡೆಗೆ ತೀವ್ರಗಮನ ಕೊಡಬೇಕೆಂದು ಸರಕಾರದಲ್ಲಿ ಒತ್ತಾಯ ಮಾಡುತ್ತೇನೆ ಮತ್ತು ಎಲ್ಲೆಲ್ಲಿ ಬಾವಿ ಕೆಲಸಗಳು ಹಾಗೂ ಪಂಪುಸೆಟ್ಟುಗಳು ಆರಂಭವಾಗಿ ಅರ್ಧದಲ್ಲಿ ನಿಂತಿವೆಯೋ ಅಲ್ಲೆಲ್ಲಾ ಅವನ್ನು ಪೂರ್ತಿಯಾಗಿ ಮುಗಿಸುವ ವ್ಯವಸ್ಥೆ ಮಾಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಸಭೆಯಲ್ಲಿ ನಮ್ಮ ಸಂಸ್ಥಾನಾದಾಮಳೆ ಬಂದಿರತಕ್ಕ ಬರಗಾಲದ ಬಗ್ಗೆ ಚರ್ಚೆ ನಡೆಯುತ್ತಿದೆ. ನಾನು ಸುಮಾರು ಬೆಳಗಾಂನಿಂದ ಬೆಂಗಳೂರಿಗೆ 450 ಮೈಲಿಗಳಿಂದ ಪ್ರಯಾಣ ಮಾಡಿಕೊಂಡು ಬಂದಿದ್ದೇನೆ. ರಸ್ತೆಯ ಉದ್ದಕ್ಕೆ ಎಲ್ಲಿ ನೋಡಿದರೂ ಮಳೆ ಬಿದ್ದಿಲ್ಲ ಬೆಳೆ ಆಗಿಲ್ಲ ದನಕರುಗಳಿಗೆ ತಿನ್ನುವುದಕ್ಕೆ ಮೇವಿಲ್ಲ ಮತ್ತು ಕುಡಿಯುವುದಕ್ಕೆ ನೀರಿಲ್ಲ, ಹೀಗಾಗಿದೆ. ಇದನ್ನು ನೋಡಿದರೆ ನಮ್ಮ ಮೇಲೆ ದೈವೀಕೋಪ ಬಹಳವಾಗಿದ್ದಂತೆ ಕಂಡುಬರುತ್ತಿದೆ. ಪಶ್ಚಿಮ ಕರಾವಳಿಯಲ್ಲಿ ಒಂದೆರಡು ತಾಲ್ಲೂಕುಗಳನ್ನು ಬಿಟ್ಟರೆ ಇನ್ನೆಲ್ಲೂ ಮಳೆ ಬಂದಿಲ್ಲ ಪೀಕಾಗಿಲ್ಲ. ಆದುದರಿಂದ ನಾವು ಈ ದಿವಸ ಇಡೀ ನಮ್ಮ ರಾಜ್ಯವನ್ನೇ ಕ್ಷಾಮಪೀಡಿತ ಪ್ರದೇಶ ಎಂದು ಸಾರಬೇಕಾದ ಪರಿಸ್ಥಿತಿಯುಂಟಾಗಿದೆ. ಇನ್ನು ಮಲೆನಾಡಿನ ಕೆಲವು ಭಾಗಗಳಲ್ಲಿ ಹಿಂದೆ ಸ್ವಲ್ಪ ಮಳೆ ಬಿದ್ದಿದ್ದ ಕಾರಣ ಅಲ್ಲೆಲ್ಲ ಬತ್ತದ ಬೆಳೆಯನ್ನು ಇಡಲಾಗಿತ್ತು. ಆದರೆ ಇತ್ತೀಚೆಗೆ ಮಳೆ ಬಾರದಿದ್ದ ಕಾರಣ ಹೊಡೆಗೆ ಬಂದಿದ್ದ ಬತ್ತದ ಬೆಳೆಯೆಲ್ಲಾ ಒಣಗಿ ಹೋಯಿತು. ಹೀಗೆ ಲಕ್ಷಾಂತರಗಟ್ಟಲೆ ಎಕರೆಗಳಲ್ಲಿ ಬತ್ತದ ಬೆಳೆ ಹಾಳಾಗಿದೆ. ಎಲ್ಲಿ ನೋಡಿದರೂ ಘೋರ ಕ್ಷಾಮ ಇಡೀ ರಾಜ್ಯವೇ ಬರಗಾಲದ ದವಡೆಗೆ ಸಿಕ್ಕಿದಂತಾಗಿದೆ. ನಮ್ಮ ಬೆಳಗಾಂ ಜಿಲ್ಲೆಯಲ್ಲೂ ಸಹಾ ಅಥಣಿ, ಚಿಕ್ಕೋಡಿ, ಗೋಕಾಕ್, ಬೈಲಹೊಂಗಲ, ಸೌಂದತ್ತಿ ಇತ್ಯಾದಿ ಎಲ್ಲಾ ತಾಲ್ಲೂಕುಗಳಲ್ಲೂ ಮಳೆ ಬಾರದೆ ಪೀಕು ಇಡುವುದಕ್ಕಾಗಿಲ್ಲ. ಜನತೆ ಕೆಲಸವಿಲ್ಲದೆ ಕಂಗೆಟ್ಟು ತಿರುಗುತ್ತಿದ್ದಾರೆ. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ತಾ 25-8-1968ರಲ್ಲಿ ಜಿಲ್ಲಾ ಸಮಿತಿಯವರು ಸಭೆ ಸೇರಿ ಇಡೀ ಜಿಲ್ಲೆಯನ್ನು ಕ್ಷಾಮಪೀಡಿತ ಪ್ರದೇಶವೆಂದು ಪರಿಗಣಿಸಿ ಎಲ್ಲ ಕಡೆಯಲ್ಲೂ ಯೋಗ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ, ಈ ವಿಚಾರದಲ್ಲಿ ಸರ್ಕಾರಕ್ಕೆ ಪೂರಾ ಒತ್ತಾಯ ಹಾಕಬೇಕೆಂದು ತೀರ್ಮಾನ ಮಾಡಿದ್ದಾರೆ. ಅಲ್ಲಿನ ಜನರ ಬವಣೆಯನ್ನು ಹೇಳಲಿಕ್ಕೆ ಆಗುವುದಿಲ್ಲ. ಜನ ದನಗಳಿಗೆ ಕುಡಿಯುವುದಕ್ಕೆ ನೀರು ಸಹಾ ಸಿಕ್ಕುತ್ತಿಲ್ಲ. ಇನ್ನು ಮಳೆ ಬರುತ್ತದೆಂಬ ಉತ್ಸಾಹ ಜನರಲ್ಲಿಲ್ಲ. ಹಾಗೆ ಒಂದು ವೇಳೆ ಮಳೆ ಬಿದ್ದರೂ ಅದರಿಂದ ಪ್ರಯೋಜನ ಇಲ್ಲ. ನಮಗೆ ಮುಂಗಾರಿ ಮಳೆ ಜೂನ್—ಜುಲೈನಲ್ಲಿ ಬೀಳಬೇಕಾಗಿತ್ತು. ಆದರೆ ಅದು ಬಾರದೆ ಈಗ ಆಗಸ್ಟ್ ಕಳೆದು ಸೆಪ್ಟಂಬರಿನಲ್ಲಿದ್ದೇವೆ. ಪರಿಸ್ಥಿತಿ ಬಹಳ ಭಯಂಕರವಾಗಿದೆ. ಯಾವ ಕೆರೆಯಲ್ಲಿ ನೋಡಿದರೂ ಒಂದು ಹನಿ ನೀರಿಲ್ಲ. ಹಿಂದೆ ಎಂದೂ ಹೀಗೆ ಆಗಿರಲಿಲ್ಲ. ಮಲೆನಾಡಿನಲ್ಲೇ ಇರತಕ್ಕ ಸುಮಾರು ಸಾವಿರಾರು ಕೆರೆಗಳಲ್ಲಿ ಕೇವಲ ಒಂದೆರಡು ಕೆರೆಗಳಲ್ಲಿ ಮಾತ್ರ ನೀರಿದೆ. ಆದರೂ ಆ ನೀರು ಬೆಳೆಗೆ ಸಾಲದು. ಅನೇಕ ಕಡೆ ಬಿತ್ತನೆ ಮಾಡಿದ್ದೆಲ್ಲಾ ಒಣಗಿದೆ.

(ಶ್ರೀ ಬಿ. ಎಂ. ಸಾಣಿಕೊಪ್ಪ)

ದನಗಳಿಗೆ ಮೇವಿಲ್ಲ. ನಮ್ಮ ಜಿಲ್ಲಾಧಿಕಾರಿಗಳನ್ನು ಕೇಳಿದರೆ ನಮ್ಮಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಸರ್ಕಾರ ಕೊಟ್ಟಿದೆಯೋ ಅಷ್ಟನ್ನು ಮಾತ್ರ ಖರ್ಚುಮಾಡುತ್ತೇವೆ, ನೀವು ಕೇಳುವ ಮಟ್ಟದಲ್ಲಿ ಖರ್ಚುಮಾಡುವುದಕ್ಕೆ ಸಾಧ್ಯವಿಲ್ಲ—ಹಣವಿಲ್ಲ ಎಂದು ಹೇಳುತ್ತಿದ್ದಾರೆ. ಡಿ.ಸಿ. ಅವರು ಹೇಳುವುದನ್ನು ನೋಡಿದರೆ ನಮ್ಮಲ್ಲಿ ಹಾಲಿ ನಡೆಯಬೇಕಾಗಿರತಕ್ಕ ಸಾವಿರಾರು ಕೆರೆಗಳ ಕೆಲಸ ನಡೆಯುವುದಕ್ಕೆ ಅವಕಾಶವಿಲ್ಲ ಎಂಬುದಾಗಿ ಕಂಡು ಬರುತ್ತಿದೆ. ಅಲ್ಲದೆ ನಮ್ಮ ಚೀಫ್ ಇಂಜಿನಿಯರವರನ್ನು ಕೇಳಿದರೆ ಅವರಿಗೆ ಯಾವ ಪ್ರಕಾರ ರಿಪೋರ್ಟು ಬರುತ್ತದೋ ಆ ಪ್ರಕಾರ ಕೆಲಸ ಮಾಡುತ್ತೇವೆಂದು ಹೇಳುತ್ತಾರೆ. ಅಷ್ಟೇ ಅಲ್ಲದೆ ಅವರಿಗೆ ಎಷ್ಟು ಅಧಿಕಾರವಿದೆಯೋ ಅಷ್ಟಕ್ಕೆ ಸರಿಯಾಗಿ ಹಣ ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಸರ್ಕಾರದವರಿಗೆ ಸಲಹೆ ಮಾಡುವುದೇನೆಂದರೆ—ಆ ಚೀಫ್ ಇಂಜಿನಿಯರಿಗೆ ಏನು ಅಧಿಕಾರ ಇದೆಯೋ ಅದನ್ನು ಜಿಲ್ಲಾಮಟ್ಟದಲ್ಲಿರತಕ್ಕ ಉನ್ನತಾಧಿಕಾರಿಗೆ ಕೊಡಬೇಕು. ಇಲ್ಲದಿದ್ದರೆ ಅಲ್ಲಿಂದ ಕಾಗದ ಪತ್ರಗಳು ಬೆಂಗಳೂರಿಗೆ ಕೇವಲ ಒಂದು ಸಹಿಗಾಗಿ ಓಡಾಡಬೇಕು ಎಂದರೆ, 15—20 ದಿವಸ ಕಾಲ ಬೇಕಾಗುತ್ತದೆ. ಇದರಿಂದ ಕೆಲಸಗಳು ನಿಧಾನವಾಗುತ್ತವೆ. ಇದನ್ನು ತಪ್ಪಿಸಲು ಪಿ.ಡಬ್ಲ್ಯು.ಡಿ. ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರಗಳನ್ನು ಕೊಟ್ಟು ಕೆಲಸ ಮಾಡಿಸಬೇಕು. ಇಲ್ಲವಾದರೆ ಗ್ರಾಮಾಂತರ ಪ್ರದೇಶದಲ್ಲಿ ಯಾವ ಒಂದು ಕೆಲಸವೂ ಆಗುವುದಿಲ್ಲ. ಆದುದರಿಂದ ಸ್ಥಳೀಯ ಮುಖ್ಯಾಧಿಕಾರಿಗಳಾದ ಡೆಪ್ಯುಟಿ ಕಮಿಷನರಿಗೂ ಮತ್ತು ಎಗ್ಸಿಕ್ಯುಟೀವ್ ಇಂಜಿನಿಯರುಗಳಿಗೂ ಹೆಚ್ಚಿನ ಅಧಿಕಾರವನ್ನು ಕೊಟ್ಟು ಸಣ್ಣಪುಟ್ಟ ಕೆರೆಗಳ ಕೆಲಸ ಹಾಗೂ ಅಲ್ಲಲ್ಲೇ ನಡೆಯಬೇಕಾಗಿರತಕ್ಕ ಬಂಡಿಂಗ್ ಕಾಮಗಾರಿ ಮತ್ತು ರಸ್ತೆ ಕಾಮಗಾರಿ ಈ ಕೆಲಸಗಳು ಸಾಕಷ್ಟು ಇರುತ್ತವೆ, ಅವುಗಳನ್ನು ಕೂಡಲೆ ಕೈಗೊಳ್ಳುವಂತೆ ಆಜ್ಞೆ ಮಾಡಬೇಕೆಂದು ಸೂಚಿಸುತ್ತೇನೆ. ಇನ್ನು ನದೀ ದಡಗಳಲ್ಲಿ ಐ.ಪಿ. ಸೆಟ್ಸ್‌ಗಳನ್ನೂ ಮತ್ತು ಬಾವಿಗಳು ಅಧಿಕವಾಗಿರತಕ್ಕಲ್ಲಿ ಪಂಪ್‌ಸೆಟ್ಟುಗಳನ್ನೂ ಒದಗಿಸಿ ಅಲ್ಲಿ ತೀವ್ರಗತಿಯಿಂದ ಕೆಲಸ ನಡೆಯುವಂತೆ ಮಾಡಬೇಕು. ಮಹಾರಾಷ್ಟ್ರದಲ್ಲಿ ಈಗ ಹೀಗೆ ಮಾಡುತ್ತಿದ್ದಾರೆ. ಅಲ್ಲಿರತಕ್ಕ ಅಸಿಸ್ಟೆಂಟ್ ಇಂಜನಿಯರುಗಳು ಮತ್ತು ಎಗ್ಸಿಕ್ಯುಟೀವ್ ಇಂಜಿನಿಯರುಗಳು ಯಾರಾದರೂ ಐ.ಪಿ. ಸೆಟ್ಟುಗಳಿಗೆ ಮತ್ತು ಪಂಪ್‌ಸೆಂಟ್ಟುಗಳಿಗೆ ಅರ್ಜಿಹಾಕಿದರೆ ಅವುಗಳನ್ನು 8 ದಿವಗಳಲ್ಲೇ ಮಂಜೂರು ಮಾಡಿ ನೀರನ್ನು ತೆಗೆದು ಬೆಳೆ ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆ. ನಮ್ಮ ಸರ್ಕಾರದವರೂ ಕೂಡ ಇಲ್ಲಿ ಹಾಗೇಕೆ ಮಾಡಬಾರದು ? ನಮ್ಮಲ್ಲಾದರೋ ಹೇರಳವಾಗಿ ಇಂಜಿನಿಯರುಗಳಿದ್ದಾರೆ, ಡಿಪ್ಲೊಮಾ ಹೋಲ್ಡರುಗಳಿದ್ದಾರೆ. ಅಷ್ಟು ಜನರು ಕೆಲಸವಿಲ್ಲದೆ ಇರುವಾಗ ಅವರಿಗೆ ಏಕೆ ಕೆಲಸವನ್ನು ಒದಗಿಸಿ ಕ್ಷಾಮಪರಿಸ್ಥಿತಿಯನ್ನು ಏಕೆ ಹತೋಟಿಗೆ ತರಬಾರದು ? ಈ ದಿವಸ ನಮ್ಮಲ್ಲಿ ಸಾಕಷ್ಟು ಸಿಬ್ಬಂದಿಯಿಲ್ಲ ಎಂಬ ಒಂದು ಕಾರಣದ ಮೇಲೆ ಟಿ.ಡಿ. ಬೋರ್ಡಿನಲ್ಲೂ ಮತ್ತು ಪಿ.ಡಬ್ಲ್ಯು.ಡಿ. ನಲ್ಲೂ ಕೆಲಸಗಳು ನಿಧಾನ ಆಗುತ್ತವೆ. ಇಲ್ಲಿಗೆ 10 ವರ್ಷಗಳು ಕಳೆದಿದ್ದಾಗ್ಯೂ ಮಲಪ್ರಭಾ—ಘಟಪ್ರಭಾ ಕೆಲಸಗಳು ಇನ್ನೂ ಮುಗಿದಿಲ್ಲ. ಹಿಡಕಲ್ ಯೋಜನೆ ಸಹಾ ಹಾಗೆ ಇದೆ. ಇವುಗಳೆಲ್ಲಾ ಮುಗಿಯದ ವಿನಾ ನಮ್ಮ ಧಾರ್ವಾಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ನೀರಾವರಿ ಬೇಸಾಯ ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಈ ನೀರಾವರಿ ಕಾಮಗಾರಿಗಳು ಮುಗಿದಲ್ಲಿ ಮಾತ್ರ ಅಲ್ಲಿ ಸುಮಾರು 6—7 ಲಕ್ಷ ಎಕರೆಗಳಲ್ಲಿ ಬತ್ತದ ಬೇಸಾಯವಾಗಬಹುದು. ಆದ್ದರಿಂದ ಈ ಎಲ್ಲಾ ಯೋಜನೆಗಳಿಗೂ ಬಡ್ಜೆಟ್ಟಿನಲ್ಲಿ ಹೆಚ್ಚಿನ ಹಣವನ್ನು ಒದಗಿಸಿ ಆ ಕೆಲಸಗಳನ್ನು ತೀವ್ರಗತಿಯಿಂದ ಮುಗಿಸಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಕಡೆಯಲ್ಲಿ ಲಿಫ್ಟ್ ಇರಿಗೇಷನ್ ಬಗ್ಗೆ ಒಂದೆರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಸಾವಿರಾರು ಎಕರೆ ನೀರಾವರಿಯಾಗುತ್ತದೆ. ನದೀ ದಂಡೆಗಳಲ್ಲೂ ಕೂಡ ಈ ಕಾರ್ಯವನ್ನು ತ್ವರಿತವಾಗಿ ನಡೆಸಬೇಕು.

ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ಎಲ್ಲೆಲ್ಲಿ ಅಭಾವ ಇದೆಯೋ ಅಲ್ಲೆಲ್ಲಾ ಬೋರ್‌ವೆಲ್‌ಗಳನ್ನು ಕೂಡಲೆ ತೆಗೆಸಿ ಜನ ದನಕರುಗಳಿಗೆ ನೀರನ್ನು ಕೂಡಲೆ ಒದಗಿಸಬೇಕು. ಅದೇ ರೀತಿ ಅಲ್ಲಲ್ಲಿ ಟ್ಯೂಬ್ ವೆಲ್‌ಗಳನ್ನು ತೆಗೆಸಿ ಬೆಳೆಗೂ ಕೂಡ ಅನುಕೂಲ ಮಾಡಬಹುದು. ಹಿಂದೆ ಹೈದ್ರಾಬಾದ್ ಮತ್ತು ಗುಜರಾತಿನಲ್ಲಿ ಬರ ಬಿದ್ದಿದ್ದ ಕಾಲಕ್ಕೆ ಅಲ್ಲಿ ಟ್ಯೂಬ್ ವೆಲ್ಲುಗಳನ್ನು ಹಾಕಿದ್ದರಿಂದ ಬಹಳ ಅನುಕೂಲವಾಯಿತಂತೆ. ಇಲ್ಲಿ ಜನರಿಗೆ ಉದ್ಯೋಗಗಳನ್ನು ಒದಗಿಸತಕ್ಕ ದೃಷ್ಟಿಯಿಂದ ರಸ್ತೆ ಕಾಮಗಾರಿ, ಕೆರೆಗಳಿಂದ ಮಣ್ಣು ತೆಗೆಯುವ ಕಾಮಗಾರಿ ಬಂಡಿಂಗ್ ಕೆಲಸ ಇವನ್ನು ನಡೆಸಲು ಬೇಕಾದಷ್ಟು ಅವಕಾಶವಿದೆ. ಈ ವಿಚಾರದಲ್ಲಿ ಕಂದಾಯ ಮತ್ತು P.W.D. ಇಲಾಖೆಗಳವರೂ ಒಂದುಗೂಡಿ ಕೆಲಸಮಾಡಿದರೆ ಬಹಳ ಅನುಕೂಲವಾಗುತ್ತದೆ. ಕಳೆದ ಮುಂಗಾರಿನಲ್ಲಿ ಕೆನಾಲ್ ಏರಿಯಾದಲ್ಲಿ ಜೋಳ—ಸೇಂಗಾ ಇವುಗಳನ್ನು ಬಿತ್ತನೆ ಮಾಡಲಾಗಿತ್ತು. ಆದರೆ ರೋಗ ಬಂದು

ಅದೂ ಕೂಡ ಹಾಳಾಯಿತು. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಹಿಂದಿನ ಮಳೆಯಲ್ಲಿ ಬಿತ್ತಿದ ಬತ್ತದ ಪೈರು 2 ಅಡಿಗಳವರೆಗೂ ಬೆಳೆಯಿತು, ಆದರೆ ಇತ್ತೀಚೆಗೆ ಮಳೆ ಹೋದದ್ದರಿಂದ ಅದೆಲ್ಲವೂ ಒಣಗಿತು. ಅಲ್ಲಿ ಈ ವರ್ಷ ಕಬ್ಬಿನ ಬೆಳೆ ಕೂಡ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ತೀವ್ರ ಗತಿಯಿಂದ ಕೆಲಸಗಳಾಗುವಂತೆ ಮಾಡದಿದ್ದರೆ ಬಹಳ ತೊಂದರೆ ಆಗುತ್ತದೆ.

5-30 P.M.

ನವಿಲು ತೀರ್ಥ ಯೋಜನೆ ಶುರುವಾಗಿದೆ, ಕೃಷ್ಣ ಮೇಲ್ದಂಡೆ ಯೋಜನೆಯನ್ನು ಪ್ರಾರಂಭ ಮಾಡಬೇಕು, ಇದರಿಂದ ಲಕ್ಷಗಟ್ಟಲೆ ಜನಕ್ಕೆ ಕೂಲಿ ಸಿಕ್ಕುತ್ತದೆ. ಕೆಲಸಮಾಡತಕ್ಕವರಿಗೆ ಹಣ ಕೊಡುವುದಕ್ಕೆ ಬದಲಾಗಿ ಕಾಳುಗಳನ್ನು ಒದಗಿಸುವಂತಹ ಯೋಜನೆಯನ್ನು ಪ್ರಾರಂಭಿಸಬೇಕು, ಅಂದರೆ ಜನಕ್ಕೆ ಉಪಕಾರವಾದಂತಾಗುತ್ತದೆ. ಅಲ್ಲಲ್ಲಿ ಗಂಜಿ ಕೇಂದ್ರಗಳನ್ನು ಪ್ರಾರಂಭ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ವಿರೋಧಪಕ್ಷದ ಸದಸ್ಯರಾದ ಶ್ರೀಮಾನ್ ನಾಗಪ್ಪನವರು ಕಾಂಗ್ರೆಸ್ ಪಕ್ಷದ ಸದಸ್ಯರು ಎಲ್ಲೆಲ್ಲಿ ಆರಿಸಿ ಬಂದಿದ್ದಾರೆ ಅಲ್ಲಿ ಕೆಲಸ ಮಾಡುತ್ತಾರೆ ಎರಡನೇದ ಕಡೆ ಮಾಡುವುದಿಲ್ಲ ಎಂದು ಹೇಳಿ ವಾದ ಮಾಡಿದ್ದಾರೆ. ಅದು ನಿಜವಾದ ಸಂಗತಿ ಅಲ್ಲ, ಏಕೆಂದರೆ ಸರ್ಕಾರ ಎಲ್ಲಾ ಕಡೆಯೂ ಕೆಲಸ ಮಾಡುತ್ತಾ ಇರುತ್ತದೆ. ಈ ವರ್ಷ ಕಾಂಗ್ರೆಸ್ ಸದಸ್ಯರು ಅಲ್ಲಿ ಆರಿಸಿ ಬಂದಿರಬಹುದು, ಮತ್ತೊಂದು ಸಂದರ್ಭದಲ್ಲಿ ಬೇರೆ ಪಕ್ಷದ ಸದಸ್ಯರು ಆರಿಸಿ ಬರಬಹುದು. ಆದ್ದರಿಂದ ಜನತೆಯ ಹಿತದೃಷ್ಟಿಯಿಂದ ಉದ್ಯೋಗ ಅಭಿವೃದ್ಧಿಯಾಗುವಂತಹ ಕೆಲಸಗಳು ಎಲ್ಲ ಕಡೆಯಲ್ಲೂ ಸರಿಯಾಗಿ ಆಗುತ್ತಾ ಇರುತ್ತದೆ, ಆ ಪ್ರಕಾರ ಖಾಯಂ ನೀರಾವರಿ ಯೋಜನೆಗಳನ್ನು, ಕೆಲಸ ಕಾರ್ಯಗಳನ್ನು ಮಾಡಬೇಕೆಂದು ತಿಳಿದು ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯ ಮಂತ್ರಿಗಳು ಈ ದಿವಸ ಅಭಾವ ಪರಿಸ್ಥಿತಿಯ ಬಗ್ಗೆ ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದಾರೆ. ಇದು ನಿಜವಾಗಿಯೂ ಅಭಾವ ಪರಿಸ್ಥಿತಿ ಅಲ್ಲ, ಕ್ಷಾಮದ ಪರಿಸ್ಥಿತಿ. ಅಭಾವ ಪರಿಸ್ಥಿತಿ ಎಂದರೆ ಸ್ವಲ್ಪ ಹೆಚ್ಚು ಕಮ್ಮಿ ಇದ್ದಂಥ, ಸ್ವಲ್ಪ ಸಾಲದೇ ಇದ್ದಿರುವ ಸಾಮಾನುಗಳನ್ನು ಹೊಂದಿಸಿಕೊಂಡು ಹೋಗತಕ್ಕ ಪರಿಸ್ಥಿತಿಯು ಅಭಾವ ಪರಿಸ್ಥಿತಿಯಾಗಬಹುದು. ಆದರೆ ಈಗ ಸಾಮಾನುಗಳೇ ಇಲ್ಲ, ಯಾವ ರೀತಿಯಿಂದಲೂ ಕೂಡ ಹೊಂದಾಣಿಕೆ ಮಾಡಿಕೊಂಡು ಹೋಗತಕ್ಕ ಪರಿಸ್ಥಿತಿ ನಮ್ಮ ಮುಂದೆ ಇಲ್ಲ. ಕಳೆದ 20 ವರ್ಷಗಳಿಂದ ನಾವೆಲ್ಲೂ ಕೇಳದಂತಹ ಕ್ಷಾಮ ಈಗ ನಮ್ಮ ಬಾಗಿಲಿಗೆ ಬಂದು ನಿಂತಿದೆ. ಮಾನ್ಯ ಮಂತ್ರಿವರ್ಯರು ಈ ಕ್ಷಾಮದ ಪ್ರಭಾವಕ್ಕೆ ಹೆಚ್ಚಾಗಿ ಬಿದ್ದಿಲ್ಲ ಎಂದು ಕಾಣುತ್ತದೆ, ಏಕೆಂದರೆ ಭವ್ಯವಾದ ಬಂಗಲೆಯಲ್ಲಿ ಅವರು ಕುಳಿತಿರತಕ್ಕವರು. ನಿಜವಾಗಿಯೂ ಕ್ಷಾಮದ ಪರಿಸ್ಥಿತಿ ಅವರಿಗೆ ಅರ್ಥವಾಗಿದೆ ಎಂದರೆ ನಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಕ್ಷಾಮ ಪರಿಸ್ಥಿತಿಗೆ ಕಳೆದ 20 ವರ್ಷಗಳ ದುರಾಡಳಿತ ಕಾರಣ ಎಂದು ನಾನು ಒತ್ತಿ ಒತ್ತಿ ಹೇಳಬೇಕಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಮೇಲೆ ಕೆಟ್ಟ ಆಡಳಿತದಿಂದ ಅನೇಕ ಕಡೆ ಎಂದರೆ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಕಾಡನ್ನು ಕಡಿಸಿ ಹಾಕುವುದಕ್ಕೆ ಅನುಮತಿಯನ್ನು ಕೊಟ್ಟಿದ್ದು ಮಳೆ ಬರದೇ ಇರುವುದಕ್ಕೆ ಒಂದು ಕಾರಣ ಎಂದು ಹೇಳುತ್ತೇನೆ. ಕೆಲವು ವೇಳೆ ಮಳೆ ಬರದೇ ಇರುವುದು ದೈವ ಪ್ರಕೃತಿ ಅದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ, ಕಾಂಗ್ರೆಸ್ ಮಂತ್ರಿಗಳು ಮಳೆ ಹುಯಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಗಿಡಗಳನ್ನು ನೆಡಿಸಿದರೆ ಸಾಲದು ಅವುಗಳು ಹೆಚ್ಚು ಹೆಚ್ಚಾಗಿ ಬೆಳೆಯುವುದಕ್ಕೆ ಕಾರ್ಯಕ್ರಮ ತಗೆದುಕೊಳ್ಳಬೇಕು. ನಮ್ಮ ಮಾನ್ಯ ಮಂತ್ರಿಗಳು ವನಮಹೋತ್ಸವಗಳನ್ನು ಮಾಡಿದರೇ ವಿನಃ ಅವುಗಳ ರಕ್ಷಣೆ ಯಾವ ರೀತಿ ಆಗಬೇಕು ಎಂಬುದರ ಕಡೆಗೆ ಗಮನ ಕೊಡಲಿಲ್ಲ. ಕೆರೆಗಳನ್ನು ದುರಸ್ತು ಮಾಡಿಸಲಿಲ್ಲ, ಕೆರೆಗಳಿಂದ ನೀರು ಬರತಕ್ಕ ನಾಲೆಗಳನ್ನು ಸರಿಪಡಿಸಲಿಲ್ಲ, ಕೆರೆಗಳ ಒಳ ಅಂಗಳವನ್ನು ರಾಜಕೀಯ ಸಂತ್ರಸ್ತರಿಗೆ ಕೊಟ್ಟು ನೀರನ್ನು ಶೇಖರಿಸಲು ಇರತಕ್ಕ ಸೌಲಭ್ಯವನ್ನೂ ಕೂಡ ಕಡಿಮೆ ಮಾಡಿದ್ದಾರೆ. ಈ ರೀತಿ ಸರ್ಕಾರದವರೇ ಕ್ಷಾಮಕ್ಕೆ ಕಾರಣರಾಗಿದ್ದಾರೆಯೇ ವಿನಃ ದೇವರಲ್ಲ. ಯಾವ ರೀತಿಯಲ್ಲೂ ದೇವರು ಜನರನ್ನು ನೋಯಿಸಬೇಕೆಂದು ಇಲ್ಲ. ಜನರು ಎಂದರೆ ನಿಜವಾಗಿಯೂ ಆ ದೇವರಿಗೆ ಕರುಣೆ ಇದೆ ಎಂದು ನನಗೆ ಅನಿಸುತ್ತದೆ. ಅನೇಕ ವೇಳೆ ಮಳೆ ಬರುವುದೇ ಅದಕ್ಕೆ ಒಂದು ಕುರುಹು ಎಂದು ಹೇಳುತ್ತೇನೆ. ಈಗ ನನ್ನ ಕ್ಷೇತ್ರದ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ನನ್ನ ಕ್ಷೇತ್ರ ಬಹುಭಾಗ ಕೃಷಿ ಪ್ರದೇಶ. ಅಲ್ಲಿ ಸಾಮಾನ್ಯವಾಗಿ ಮಂತ್ರಿಗಳ ಅಭಿಪ್ರಾಯ

(ಶ್ರೀ ಎನ್. ಎ. ಚನ್ನೇಗೌಡ.)

ದಲ್ಲಿ ನೀರಾವರಿ ಸೌಲಭ್ಯಗಳು ಮತ್ತು ಪಂಪುಗಳು ಇದೆ ಎಂದು ಭಾವಿಸಬಹುದು, ಅಲ್ಲಿ ಏನೂ ಅಭಾವವೇ ಇಲ್ಲ, ಕ್ಷಾಮದ ಪರಿಸ್ಥಿತಿ ಇಲ್ಲವೇ ಇಲ್ಲ ಎಂದು ತಿಳಿದುಕೊಂಡಿದ್ದಾರೆ. ನಿಜವಾಗಿಯೂ ನಮ್ಮ ನೆರೆಯ ನಾಗಮಂಗಲ ತಾಲ್ಲೂಕು ಮತ್ತು ಕೃಷ್ಣರಾಜಪೇಟೆ ತಾಲ್ಲೂಕುಗಳ ಸದಸ್ಯರನ್ನು ಬೇಕಾದರೆ ವಿಚಾರ ಮಾಡಿ ತಿಳಿದುಕೊಳ್ಳಿ. ಮೇಲುಕೋಟೆ ಮತ್ತು ಚಿನಕುರುಳಿ ಹೋಬಳಿಗಳಲ್ಲಿ ಸಹಿಸಲಾರದಷ್ಟು ಕ್ಷಾಮ ಪರಿಸ್ಥಿತಿ ಇದೆ. ಬೆಟೆಹಳ್ಳಿಯಿಂದ ತೆಂಡೆಕೆರೆವರೆಗೂ ಇರುವ ವಿಶಾಲವಾದ ಪ್ರದೇಶದಲ್ಲಿ ಒಂದು ತೊಟ್ಟು ನೀರು ಇಲ್ಲದೇ ಇರುವುದನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಪಾಂಡವಪುರದಿಂದ ಮೇಲುಗಡೆ ಮೇಲುಕೋಟೆ ಹೋಬಳಿ ಸ್ಥಿತಿ ಬಹಳ ಚಿಂತಾಜನಕವಾಗಿದೆ, ಈ ಪ್ರದೇಶಗಳಲ್ಲಿ ಇನ್ನೂ ನಾಟಿ ಹಾಕಿಲ್ಲ, ಅಲ್ಪ ಸಲ್ಪ ಹಾಕಿದ್ದರೂ ಕೂಡ ಮಳೆ ಇಲ್ಲದೇ ಸಂಪೂರ್ಣ ವಾಗಿ ನಾಶವಾಗಿದೆ. ಇಂತಹ ಭೀಕರ ಪರಿಸ್ಥಿತಿಯಲ್ಲಿ ಕ್ಷಾಮ ಇಲ್ಲ, ಅಭಾವ ಇದೆ ಎಂದರೆ ಅಧಿಕಾರಿಗಳು ಎಷ್ಟುಮಟ್ಟಿಗೆ ವರದಿ ಮಾಡಿದ್ದಾರೆ ಎನ್ನುವುದನ್ನು ನಾವು ತಿಳಿದುಕೊಳ್ಳಬಹುದು. ಇದು ಒಂದು ವರ್ಷದ ಕೊರತೆ ಅಲ್ಲ, ಕಳೆದ 6 ವರ್ಷಗಳಿಂದಲೂ ಕೂಡ ಸಕಾಲದಲ್ಲಿ ಮಳೆ ಬರುತ್ತಾ ಇಲ್ಲ, ಕ್ಷಾಮ ಪುನಃ ಪುನಃ ಬರುತ್ತಿರುವುದಕ್ಕೆ ಕಾರಣವೇನೆಂಬುದನ್ನು ಸರ್ಕಾರದವರು ಪತ್ತೆ ಹಚ್ಚುವುದಕ್ಕೆ ಪ್ರಯತ್ನ ಮಾಡಿಲ್ಲ ಅವರ ಕೆಲಸ ಏನೆಂದರೆ ಎಲ್ಲಾದರೂ ಮನೆಗೆ ಬೆಂಕಿ ಬಿದ್ದರೆ ಆಗ ಬೆಂಕಿಯನ್ನು ಆರಿಸುವುದಕ್ಕೆ ಬಾವಿ ತೋಡಿಸುವ ಕೆಲಸ ಮಾಡುವುದಾಗಿದೆ. ಶಾಶ್ವತವಾದ ಯಾವ ಕೆಲಸವನ್ನೂ ಕೂಡ ಮಾಡಿಲ್ಲ ಎಂದರೆ ಅತಿಶಯೋಕ್ತಿಯಲ್ಲ. ಕ್ಷಾಮ ಪರಿಹಾರದ ಬಗ್ಗೆ ಎರಡು ವಿಧ ವಾದ ಶಾಶ್ವತವಾದ ಕೆಲಸಗಳನ್ನು ಅವರು ಮಾಡಬೇಕು. ಒಂದು ಷಾರ್ಟ್‌ಟರ್ಮ್ ವರ್ಕ್ಸ್. ಗಂಜಿ ಕೇಂದ್ರಗಳನ್ನು ತೆಗೆಯುವುದು ಕುಡಿಯುವ ಭಾವಿ, ರಸ್ತೆ ದುರಸ್ಥಿ ಇತ್ಯಾಧಿ ಇದು ಬಹಳ ಅತ್ಯವಶ್ಯಕ. ಗಂಜೀ ಕೇಂದ್ರಗಳನ್ನು ತೆಗೆಸಿದರೂ ಕೂಡ ಅಲ್ಲೂ ಅನೇಕ ರೀತಿಯಲ್ಲಿ ಪ್ರಭಾವಗಳು ನಡೆದೇ ನಡೆಯುತ್ತದೆ. ಆರೀತಿ ಆಗದಂತೆ ನೋಡಿಕೊಳ್ಳಬೇಕು. ಅಭಾವ ಪ್ರದೇಶದಲ್ಲಿ ಕಂದಾಯವನ್ನು ರದ್ದುಪಡಿಸುತ್ತೇವೆ ಎಂದು ಮಾನ್ಯಮಂತ್ರಿಗಳು ಹೇಳಿದರು. ಕಳೆದ ಮೂರು ವರ್ಷಗಳಿಂದ 4 ಅಣೆಗಿಂತ ಕಮ್ಮಿ ಬೆಳೆಯಾಗಿರತಕ್ಕ ಉತ್ತರ ಕರ್ನಾಟಕದ ಕೆಲವೊಂದು ಪ್ರದೇಶಗಳಲ್ಲಿ ಮಾತ್ರ ಆ ರೀತಿ ಮಾಡಿ ನಮ್ಮ ಕ್ಷೇತ್ರದಲ್ಲಿ ಆ ಒಂದೂ ರಿಯಾಯತಿಯನ್ನು ಅಥವಾ ರೆಮಿಷನನ್ನು ಕೊಟ್ಟಿಲ್ಲ. ನಾನು ಅನೇಕವೇಳೆ ಅಧಿಕಾರಿಗಳಲ್ಲಿ ಹೋಗಿ ಹೇಳಿದ್ದೇನೆ. ನಾಳೆ ಮಾಡಿಸಿಕೊಡುತ್ತೇನೆ, ಆ ಅಧಿಕಾರಿಗೆ ತಿಳಿಸಿದ್ದೇನೆ, ಹಾಗೆ ಮಾಡುತ್ತಾರೆ ಹೀಗೆ ಮಾಡುತ್ತಾರೆ ಎಂದು ಕಾಲ ಕಳೆಯುತ್ತಾರೆಯೇ ಹೊರತು ಏನೂ ಮಾಡಿಲ್ಲ. ಮೂರು ವರ್ಷಗಳ ಕಾಲ ಏಕ ಪ್ರಕಾರ ಮಳೆ ಇಲ್ಲದೆ ರೈತರು ಬಡಬಡಿಸುತ್ತಾ ಇದ್ದಾರೆ, ಅವರ ಕಡೆಗೆ ಗಮನ ಕೊಟ್ಟು ಕಂದಾಯವನ್ನು ಮಾಫಿ ಮಾಡುವ ಕೆಲಸಕ್ಕೆ ಕೈ ಹಾಕಿಲ್ಲ, ಅದರ ಜೊತೆಗೆ ಸೊಸೈಟಿಗಳ ಸಾಲ. ಇದೇ ಸಮಯದಲ್ಲಿ ಸೊಸೈಟಿಗಳು ಸಾಲವನ್ನೂ ಕೂಡ ಒತ್ತಾಯ ಪೂರ್ವಕವಾಗಿ ವಸೂಲು ಮಾಡುವುದಕ್ಕೆ ಪ್ರಯತ್ನ ಪಡುತ್ತಾ ಇದ್ದಾರೆ. ತಿನ್ನುವುದಕ್ಕೆ ಅನ್ನ ಇಲ್ಲ, ಹೊದೆಯುವುದಕ್ಕೆ ಬಟ್ಟೆ ಇಲ್ಲ ಇಂತಹ ಸಂದರ್ಭದಲ್ಲಿ ತೆಗೆದುಕೊಂಡಿರುವ ಸಾಲವನ್ನು ಹೇಗೆ ತಾನೆ ವಾಪಸ್‌ಕೊಡುತ್ತಾನೆ? ಅವನು ಸಾಲವನ್ನು ವಾಪಸು ಕೊಡದಿದ್ದರೆ ಅವನಿಗೆ ಇನ್ನಾವ ಸೌಲಭ್ಯವೂ ಸಿಕ್ಕುವುದಿಲ್ಲ ಎಂದು ಹೇಳಿ ಅವನ ಮೇಲೆ ಇಲ್ಲದ ಸಲ್ಲದ ಆರೋಪವನ್ನು ಮಾಡಿ ಕೇಸನ್ನು ಹಾಕುತ್ತಾ ಇದ್ದಾರೆ. ದುಡ್ಡನ್ನು ವಸೂಲು ಮಾಡಬಾರದು ಅಂತ ಅಲ್ಲ. ಷಾರ್ಟ್ ಟರ್ಮ್ ಸಾಲವನ್ನು ಮುಂದುವರಿಸಿಕೊಂಡು ಹೋಗಬಹುದು, ಅದನ್ನು ಮೀಡಿಯಂ ಟರ್ಮ್ ಆಗಿ ಕನ್‌ವರ್ಟ್ ಮಾಡಿಕೊಂಡರೆ ರೈತರಿಗೆ ಅನುಕೂಲವಾಗುತ್ತದೆ.

ದನಕರುಗಳಿಗೂ ಕೂಡ ಮೇವನ್ನು ತರಿಸಿಕೊಡುತ್ತೇವೆ ಸಾಗಾಣಿಕೆ ಖರ್ಚನ್ನು ನಾವು ರೈತರ ಮೇಲೆ ಹಾಕುವುದಿಲ್ಲ ರೈತರು ಯಾವ ಕಡೆಯಿಂದ ಆದರೂ ತರಿಸಿಕೊಳ್ಳಬಹುದು ಎಂದು ಹೇಳುತ್ತಾ ಇದ್ದಾರೆ. ರೈತರಿಗೆ ಮೇವನ್ನು ಕೊಂಡುಕೊಳ್ಳುವುದಕ್ಕೇ ದುಡ್ಡಿಲ್ಲದಿರುವಾಗ ಸಾಗಿ ಸುವ ಖರ್ಚನ್ನು ಮಾತ್ರ ಸರ್ಕಾರದವರು ಕೊಡುತ್ತೇವೆ ಎಂದರೆ ಇದು ಹಾಸ್ಯಾಸ್ಪದವಾದುದು. ಇದರ ಜೊತೆಗೆ ಲಾಂಗ್ ಟರ್ಮ್ ರಿಲೀಫ್ ವರ್ಕ್ಸ್ ಕೂಡ ತೆಗೆದುಕೊಳ್ಳಬೇಕು. ನಾನು ಮೊದಲೇ ಹೇಳಿದಂತೆ ಅರಣ್ಯವನ್ನು ಕ್ಯಾಚ್‌ಮೆಂಟ್ ಏರಿಯಾದಲ್ಲಿ ಬೆಳೆಸುವುದಾದರೆ ಇಂದಲ್ಲ ನಾಳೆಯಾದರೂ ಕೂಡ ಈ ಕ್ಷಾಮದ ಭೀಕರತೆಯನ್ನು ಕಡಿಮೆ ಮಾಡಬಹುದು. ಮತ್ತು ನಮ್ಮ ರಾಜ್ಯದ ವಾಟರ್ ಲೆವಲ್ಸನ್ನು ಇನ್‌ವೆಸ್ಟಿಗೇಟ್ ಮಾಡಿಸಿ ಬೋರ್ ವೆಲ್ಸನ್ನು ಹಾಕುವುದಕ್ಕೆ ಎಲ್ಲೆಲ್ಲಿ ಸಾಧ್ಯತೆ ಇದೆ ಎಂಬುದನ್ನು ಕಂಡುಹಿಡಿದು ಕೋ-ಆಪರೇಟೀವ್ ಬೇಸಿಸ್ ಮೇಲೆ ರೈತರಿಗೆ ಬೋರ್ ವೆಲ್ಸನ್ನು ತೆಗೆಯುವುದಕ್ಕೆ ಹಣವನ್ನು ಒದಗಿಸಿಕೊಟ್ಟು ಅದನ್ನು ಅವರಿಂದ ಕಂತಿನ ಪ್ರಕಾರ ವಸೂಲು ಮಾಡಿ ಕೊಳ್ಳಬಹುದು ಎಂದು ಹೇಳುತ್ತೇನೆ. ಇನ್ನು ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಕೆಲವು ಕಡೆ

ಒಂಡಿಂಗ್ ಕೆಲಸ ಮಾಡಿದ್ದಾರೆ. ಒಂದು ತಾಲ್ಲೂಕಿನಲ್ಲಿ 3-4 ಗ್ರಾಮಗಳಲ್ಲಿ ಮಾಡಿದ್ದಾರೆ. ಆ ರೀತಿ ಮಾಡುವುದರಿಂದ ಇಡೀ ತಾಲ್ಲೂಕಿನಲ್ಲ ಸಾಯಿಲ್ ಕನ್‌ಸರ್ವೇಷನ್ ಮಾಡಿದ ಹಾಗಾಗುವುದಿಲ್ಲ. ಆದಷ್ಟು ಈ ದಿಶೆಯಲ್ಲಿ ಕೆಲಸವಾಗಬೇಕು. ಈ ಅಭಾವ, ಕ್ಷಾಮದ ಕಾಲದಲ್ಲಿ ಲಾಂಗ್ ರೇಂಜ್ ಪಾಲಿಸಿ ಹಾಕಿಕೊಂಡು ಡೆವಲಪ್‌ಮೆಂಟಲ್ ಆಕ್ಟಿವಿಟೀಸ್‌ಗೆ ಹೆಚ್ಚು ಹಣ ಖರ್ಚು ಮಾಡಿದರೆ ಕೆಲಸಗಳೂ ಆಗುತ್ತವೆ ಮತ್ತು ಜನಗಳಿಗೆ ಕೆಲಸವೂ ಕೂಡ ದೊರೆತು ಅವರ ಜೀವನ ಸಾಗಿಸಲು ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಪಾಂಡವಪುರದಿಂದ ತುಮಕೂರಿಗೆ ಒಂದು ರೈಲ್ವೆ ಲೈನ್ ಹಾಕಬೇಕೆಂದು ಬೇಡಿಕೆ ಇದೆ, ಇಂತಹ ಸಮಯದಲ್ಲ ಈ ಕಾರ್ಯವನ್ನು ಕೈಕೊಂಡರೆ ಡೆವಲಪ್‌ಮೆಂಟಲ್ ಕೆಲಸವೂ ಆಗುತ್ತದೆ ಮತ್ತು ತಕ್ಷಣದಲ್ಲಿ ಕ್ಷಾಮ ಪೀಡಿತ ಪ್ರದೇಶದ ಜನರಿಗೂ ಕೆಲಸ ಹೆಚ್ಚಾಗಿ ದೊರಕುತ್ತದೆ. ಇದೇ ರೀತಿ ಹೇಮಾವತಿ ನದಿ ಅಣೆಕಟ್ಟಿನ ಕೆಲಸವನ್ನು ಬಹಳ ತ್ವರಿತವಾಗಿ ಮಾಡಬೇಕು. ಲ್ಯಾಂಡ್ ಆಕ್ವಿಸಿಷನ್‌ಗೆ ಅಡ್ಡಿ ಬರದಿರುವ ಪ್ರದೇಶದಲ್ಲಿ ಹೇಮಾವತಿ ಅಣೆಕಟ್ಟಿನ ಕೆಳಭಾಗದ ನಾಲೆಗಳ ಕಾರ್ಯವನ್ನು ಪ್ರಾರಂಭಿಸಿ ಕ್ಷಾಮ ಪರಿಸ್ಥಿತಿಯಲ್ಲಿ ಬಳಲುವ ಜನರಿಗೆ ಕೆಲಸವನ್ನು ಒದಗಿಸಿ ಕೊಡಲಿ ಎಂದು ಒತ್ತಾಯ ಪಡಿಸುತ್ತೇನೆ. ಕೆಲಸ ಬೇಗ ಮಾಡದೆ 10—12 ವರ್ಷ ತೆಗೆದುಕೊಂಡರೆ ಕ್ಷಾಮ ಬರಲು ಅವಕಾಶವಾಗುವುದು, ಅನುಕೂಲವಾಗುವುದಿಲ್ಲ. ಅದರ ಬದಲು ಆದಷ್ಟು ಜಾಗ್ರತೆ ಹೇಮಾವತಿ ಯೋಜನೆಯನ್ನು ಕಾರ್ಯಗತ ಮಾಡಿದರೆ ಅನುಕೂಲವಾಗುವುದು. ಅಲ್ಲದೆ ನಾಲೆಯ ಮೇಲು ಭಾಗದಲ್ಲಿ ಖುಷ್ಕಿ ಜಮೀನುಗಳಿಗೆ ನೀರನ್ನೊದಗಿಸಲು ಲಿಫ್ಟ್ ಇರಿಗೇಷನ್ ಯೋಜನೆಯನ್ನು ಜಾರಿಗೆ ತರಬೇಕು. ನಾಲೆಯ ಮೇಲು ಭಾಗದಲ್ಲಿರುವ ಜನರಿಗೆ ಲಿಫ್ಟ್ ಇರಿಗೇಷನ್ನಿಗೆ ಅವಕಾಶ ಕೊಟ್ಟರೆ ತೊಂದರೆಯಾಗುವುದೆಂದು ಹೇಳಿ ಅದಕ್ಕೆ ಅವಕಾಶಕೊಡಲು ಚೀಫ್ ಎಂಜಿನಿಯರ ಆರ್ಡರಾಗಬೇಕೆಂದು ಹೇಳುತ್ತಿದ್ದಾರೆ. ಅದನ್ನು ಗಮನಿಸಿ ಹೆಚ್ಚು ಜನರಿಗೆ ಲಿಫ್ಟ್ ಇರಿಗೇಷನ್ನಿಗೆ ನಾಲೆಯ ಮೇಲು ಭಾಗದಲ್ಲಿ ಅಂದರೆ ಕೃಷ್ಣರಾಜಸಾಗರ ತೊಣ್ಣೂರು ಕೆರೆ ಮತ್ತು ವಿ. ಸಿ. ನಾಲಾ ಸಿ. ಡಿ. ಎಸ್. ನಾಲಾ ಮುಂತಾದ ಪ್ರದೇಶಗಳಲ್ಲಿ ಬೆಳೆ ಬೆಳೆಯಲು ಅವಕಾಶ ಮಾಡಿಕೊಡಬೇಕು ಎಂದು ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

†ಶ್ರೀ ಎಂ. ಎಸ್. ರಾಮಣ್ಣ (ತುರುವೇಕೆರೆ).—ಸ್ವಾಮಿನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಈ ಮೈಸೂರು ದೇಶದಲ್ಲುಂಟಾಗಿರುವ ಅಭಾವ ಪರಿಸ್ಥಿತಿಯ ಬಗ್ಗೆ ಮಾನ್ಯ ಸದಸ್ಯರು ಕೆಲವು ಮಾತುಗಳನ್ನು ಹೇಳಿದ್ದಾರೆ. ನಿಜವಾಗಿಯೂ ಕೂಡ ಇವತ್ತು ಮೈಸೂರು ದೇಶದ ಬಗ್ಗೆ ಹೇಳುವುದಾದರೆ ಅದು ಬಹಳ ಕಷ್ಟಕರವಾದ ಸ್ಥಿತಿಯಲ್ಲಿದೆ ಎಂದು ಹೇಳಿದರೆ ತಪ್ಪಾಗಲಾರದು. ಇಂದು ತುಮಕೂರು ಜಿಲ್ಲೆಯಲ್ಲಿ ಸೇಕಡ 90 ಜನರು ಕ್ಷಾಮದ ಬಾಯಿಗೆ ತುತ್ತಾಗಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಮತ್ತು ಉತ್ಪ್ರೇಕ್ಷೆಯಾಗಲಾರದು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇಂದು ತುಮಕೂರು ಜಿಲ್ಲೆಯಲ್ಲಿ ಅನೇಕ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ, ದನಗಳಿಗೆ ಕುಡಿಯಲು ನೀರಿಲ್ಲ, ಇಂಥ ಸಂಕಟಕರ ಪರಿಸ್ಥಿತಿ ಅಲ್ಲಿದೆ. ಸರಕಾರದವರು ಅದರ ಪರಿಹಾರಕ್ಕೆ ಕಾರ್ಯಕ್ರಮ ಹಾಕಿದ್ದಾರೆ. ಆದರೆ ಅದನ್ನು ಕಾರ್ಯಗತ ಮಾಡುವುದಕ್ಕೆ ಬಹಳ ಅಡಚಣೆಯಿದೆ. ಆದಷ್ಟು ಜಾಗ್ರತೆ ಇರುವ ಕಷ್ಟವನ್ನು ನಿವಾರಣೆ ಮಾಡುವುದಾಗಿ ಹೇಳುತ್ತಾರೆ. ಆದರೆ ನಾನು ಒಂದು ಅಂಶವನ್ನು ಹೇಳಬೇಕಾಗಿದೆ. ಇವತ್ತು ದೇಶದಲ್ಲಿರುವ ಎಲ್ಲಾ ಇಲಾಖೆಗಳ ಜನರೂ ಕೂಡ ಸೇರಿ ಇಂಥ ಕಾಲದಲ್ಲಿ ತಮ್ಮ ಕರ್ತವ್ಯವನ್ನು ಮಾಡಬೇಕು. ನಮ್ಮಲ್ಲಿ ಪಿ ಡಬ್ಲ್ಯು ಇಲಾಖೆ, ಫಾರೆಸ್ಟ್ ಇಲಾಖೆ, ಸಾಯಿಲ್ ಕನ್‌ಸರ್ವೇಷನ್ ಇಲಾಖೆ ಮುಂತಾದ ಅನೇಕ ಇಲಾಖೆಗಳಿವೆ. ಅವುಗಳೆಲ್ಲವೂ ತಮ್ಮ ಹಣವನ್ನು ಕೂಡಿಸಿ ಕೆಲಸ ಮಾಡಿದರೆ ಪರಿಹಾರ ಜಾಗ್ರತೆ ಆಗುತ್ತದೆ. ಜೊತೆಗೆ ಇಂಡಿಯಾ ಸರಕಾರದವರೂ ಸಹಾಯ ಸಾಕಷ್ಟು ಮಾಡಬೇಕು. ಮೈಸೂರು ಸರಕಾರದವರು ಪ್ಲಾನ್ ಮಾಡಿ 8 ಕೋಟಿ ಚಿಲ್ಲರೆ ಬೇಕೆಂದು ಕೇಳಿದರೆ ಕೇವಲ 2 ಕೋಟಿ ಚಿಲ್ಲರೆಯನ್ನು ಇಂಡಿಯಾ ಸರಕಾರದವರು ಮೈಸೂರಿಗೆ ಕೊಟ್ಟಿದ್ದಾರೆ. ಅದು ಏನೇನೂ ಸಾಲದು. ಇಂದು ನಮ್ಮ ದೇಶದ ಪರಿಸ್ಥಿತಿ ಬಹಳ ಕಷ್ಟಕರವಾಗಿರುವಾಗ ಇಂಡಿಯಾ ಸರಕಾರ ಜಾಸ್ತಿಯಾಗಿ ಸಹಾಯ ಮಾಡಬೇಕು. ಹೆಚ್ಚು ಆಹಾರ ಪದಾರ್ಥಗಳನ್ನೊದಗಿಸಬೇಕು. ಆ ರೀತಿ ಕೊಡುವಂತೆ ಈ ಸಭೆ ಮತ್ತು ಸರಕಾರ ಇಂಡಿಯಾ ಸರಕಾರವನ್ನು ಒತ್ತಾಯ ಮಾಡಬೇಕು ಮತ್ತು ಇಂಡಿಯಾ ಸರಕಾರದ ಮೇಲೆ ಪೂರ್ಣವಾದ ಒಂದು ಪ್ರಭಾವ ಬೀರಬೇಕು. ಹಾಗೆ ಮಾಡದಿದ್ದರೆ ನಿಜವಾಗಿಯೂ ಕೂಡ ಈ ದೇಶದಲ್ಲಿರುವ ಕಷ್ಟ ಪರಿಸ್ಥಿತಿಯನ್ನು ಪರಿಹಾರ ಮಾಡಲು ಸಾಧ್ಯವಾಗದೇ ಹೋಗಬಹುದು ಎಂಬ ಶಂಕೆ ಇದೆ. ಇಂದು 64 ಫ್ಯಾಮಿನ್ ಹೆಡ್‌ನಲ್ಲಿ ಸರಕಾರ ಕೊಡುವ ಹಣ ಏತಕ್ಕೂ ಸಾಲದು, ಈಗ ಕೊಟ್ಟಿರುವ ಹಣದ ಜೊತೆಗೆ ಸರಕಾರ ಇನ್ನೂ ಜಾಸ್ತಿಯಾಗಿ ಹಣ ಕೊಡಬೇಕು, ಜೊತೆಗೆ ಅಧಿಕಾರಿಗಳಿಗೆ ಸರಿಯಾದ ನಿರ್ದೇಶನ ಕೊಡಬೇಕು. ತುಮಕೂರು ಜಿಲ್ಲೆಯ ಬಗ್ಗೆ ಹೇಳುವುದಾದರೆ ಅಲ್ಲಿನ ಜಿಲ್ಲಾಧಿಕಾರಿಗಳು ಯಾವ ಹೊಸ ಕೆಲಸವನ್ನೂ ತೆಗೆದುಕೊಳ್ಳಬಾರದೆಂದು

(ಶ್ರೀ ಎಂ. ಎನ್. ರಾಮಣ್ಣ)

ಆಜ್ಞೆ ಮಾಡಿದ್ದಾರೆ. ಕ್ಷಾಮವಿದೆಯೆಂಬುದನ್ನು ಒಂದು ಕಡೆ ನಾವು ಒಪ್ಪುತ್ತೇವೆ ಯಾವ ವರ್ಷವೂ ಕಾಣದ ಕಷ್ಟ ಇಂದು ಬಂದಿದೆ. ಅದಕ್ಕಾಗಿ ಹಣ ಕೊಟ್ಟಿದ್ದಾರೆ, ಅದನ್ನು ವಿನಿಯೋಗ ಮಾಡಿ ಎಂದರೆ ಜಿಲ್ಲಾಧಿಕಾರಿಗಳು ರೆವೆನ್ಯೂ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಮೀಟಿಂಗ್ ಮಾಡಿರುವುದಾಗಿಯೂ ಹೊಸ ಕೆಲಸವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದೂ ಹೇಳುತ್ತಾರೆ. ಜೊತೆಗೆ ತುಮಕೂರು ಜಿಲ್ಲೆಯ ದೌರ್ಭಾಗ್ಯವೋ ಏನೋ ಎಲ್ಲಾ ಜಿಲ್ಲೆಗಳಲ್ಲೂ ಕಂದಾಯವನ್ನು ತಾತ್ಕಾಲಿಕವಾಗಿ ವಸೂಲು ಮಾಡಬಾರದು ಎಂದು ಹೇಳಿದರೂ ನಮ್ಮ ಜಿಲ್ಲೆಯಲ್ಲಿ ಆ ರೀತಿ ಏನೂ ಹೇಳಿಲ್ಲ. ಅದಕ್ಕೆ ಬದಲಾಗಿ ಸೇಕಡ 90ರಷ್ಟು ಕಂದಾಯವನ್ನು ಡಿಸೆಂಬರಿನೊಳಗೆ ವಸೂಲು ಮಾಡಬೇಕೆಂದು ಕಡ್ಡಾಯವಾಗಿ ಅಧಿಕಾರಿಗಳಿಗೆ ಹೇಳಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ನಿನ್ನೆ ಕಷ್ಟವಿರುವ ಕಡೆ ಕಂದಾಯವನ್ನು ತಾತ್ಕಾಲಿಕವಾಗಿ ನಿಲ್ಲಿಸಿ, ಕೊಡುವುದಕ್ಕೆ ಸಾಧ್ಯವಿರುವವರಿಂದ ಮಾತ್ರ ವಸೂಲಿ ಮಾಡಿ ಎಂದು ತಿಳಿಸಿರುವುದಾಗಿ ಹೇಳಿದ್ದಾರೆ. ಆದರೆ ಅಧಿಕಾರಿಗಳು ತಮ್ಮ ಅಧಿಕಾರವನ್ನು ಚಲಾಯಿಸಿ ಎಲ್ಲರಿಂದಲೂ ವಸೂಲು ಮಾಡುವಂತೆ ಹೇಳುವ ಮನೋಭಾವವನ್ನು ಹೊಂದಿದ್ದಾರೆ. ಆದುದರಿಂದ ಕಳೆದ 4 ವರ್ಷಗಳಿಂದ, 1965—66 ರಿಂದ 68—69ರವರೆಗೆ ಜಮೀನು ಕಂದಾಯ ಮತ್ತು ಸರಕಾರಕ್ಕೆ ಕೊಡಬೇಕಾದ ಕಂತುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವುದಕ್ಕೆ ಸರಕಾರ ತಕ್ಷಣ ಆಜ್ಞೆ ಮಾಡಬೇಕು ಎಂದು ನಾನು ಮನವಿ ಮಾಡುತ್ತೇನೆ. ಜೊತೆಗೆ ಸರಕಾರದಿಂದ ಟ್ರಾಕ್ಟರು ಮುಂತಾದುವುಗಳ ಬಗ್ಗೆ ಸಾಲ ತೆಗೆದುಕೊಂಡಿರುವುದೇನಿದೆ ಅದರ ಕಂತನ್ನು ವಸೂಲು ಮಾಡುವುದನ್ನು ನಿಲ್ಲಿಸಬೇಕು ಮತ್ತು ಅದರ ಮೇಲೆ ಸುಸ್ತಿ ಬಡ್ಡಿ ಹಾಕಬಾರದು. 64—65ರಲ್ಲಿ ಕೊಡಬೇಕಾದ್ದನ್ನು ಕೊಟ್ಟಿಲ್ಲದಿರುವುದಕ್ಕೆ ಸುಸ್ತಿಬಡ್ಡಿ ಹಾಕಿ ವಸೂಲು ಮಾಡಬೇಕೆಂದು ಹೇಳುವ ಸಂದರ್ಭವಿದೆ. ಆದರೆ ದೇಶದಲ್ಲಿ ಕಷ್ಟ ಪ್ರಾಪ್ತವಾಗಿರುವಾಗ ರೈತರಿಗೆ ಸ್ವಲ್ಪಮಟ್ಟಿಗಾದರೂ ಸಹಾಯ ಮಾಡಬೇಕಾದ್ದು ಸರಕಾರದ ಕರ್ತವ್ಯ ಎಂಬುದನ್ನು ಗಮನಿಸಿ ಅಧಿಕಾರಿಗಳಿಗೆ ಸರಕಾರ ಸೂಕ್ತ ಆದೇಶ ನೀಡಬೇಕು. ಎರಡನೆಯದಾಗಿ ಜಮೀನು ಅಭಿವೃದ್ಧಿ ಬ್ಯಾಂಕು ನೀರಾವರಿ ಬಾವಿಗಳಿಗೆ ಮತ್ತು ಪಂಪುಸೆಟ್ಟುಗಳಿಗೆ ಹಣ ಕೊಡುವುದಿದೆ. ಆದರೆ ಕ್ಷಾಮ ಪರಿಸ್ಥಿತಿಯಿರುವ ಕಡೆ ಈ ಬ್ಯಾಂಕು ಡಿಫಾಲ್ಟರ್ ಆಗಿರುವವರಿಗೆ ಬಾವಿಗಳಿಗೆ ಹಣ ಕೊಡುವುದಿಲ್ಲ ಮತ್ತು ಪಂಪುಸೆಟ್ಟುಗಳನ್ನೂ ಕೊಡುವುದಿಲ್ಲ. ಇದರಿಂದ ಅನೇಕ ರೈತರು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದ ಸಾಲ ತೆಗೆದು ಬಾವಿಗಳನ್ನು ತೋಡಿ ಪಂಪುಸೆಟ್ಟುಗಳ ಮೂಲಕ ನೀರನ್ನು ಉಪಯೋಗ ಮಾಡಿ ಬೆಳೆ ತೆಗೆಯಲು ಅಡ್ಡಿಯಾಗಿದೆ. ಇದಕ್ಕಾಗಿ ಸೂಕ್ತವಾದ ಆದೇಶವನ್ನು ಬ್ಯಾಂಕುಗಳಿಗೆ ಕೊಟ್ಟು ಎಲ್ಲಿ ಕ್ಷಾಮ ಜಾಸ್ತಿಯಾಗಿದೆ ಅಂಥ ಕಡೆ ಈ ಬ್ಯಾಂಕಿನ ಮೂಲಕ ಹೊಸದಾಗಿ ಬಾವಿ ಮಾಡುವುದಕ್ಕೆ ಮತ್ತು ಪಂಪುಸೆಟ್ಟುಗಳಿಗೆ ಹಣ ಕೊಡುವುದಕ್ಕೆ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಬೆಳೆ ಸಾಕಷ್ಟು ತೆಗೆಯಲು ತೊಂದರೆಯಾಗುವುದು. ಜೊತೆಗೆ ಸಾಯಿಲ್ ಕನ್‌ಸರ್ವೇಷನ್ ಕೆಲಸಕ್ಕೆ ಜಾಸ್ತಿ ಹಣ ಖರ್ಚು ಮಾಡಿ ಅನೇಕರಿಗೆ ಕೆಲಸ ಒದಗಿಸುವುದಕ್ಕೆ ಸಾಧ್ಯವಿದ್ದರೂ ಇರುವ ಸಿಬ್ಬಂದಿ ಸಾಲದು. ರೆವೆನ್ಯೂ ಮಂತ್ರಿಗಳು ತುರುವೇಕೆರೆ ತಾಲ್ಲೂಕಿಗೆ ಬಂದಾಗ ಈ ಕೆಲಸವನ್ನು ಜಾಸ್ತಿಯಾಗಿ ಮಾಡಬೇಕೆಂದು ಹೇಳಿದಾಗ ಟೆಕ್ನಿಕಲ್ ಸ್ಟ್ಯಾಫ್ ಇಲ್ಲ, ಆದುದರಿಂದ ಸಾಧ್ಯವಿಲ್ಲ ಎಂದು ಹೇಳಿದರು. ನನ್ನ ಕ್ಷೇತ್ರದಲ್ಲಿ ಒಂದು ಹಳ್ಳಿಯಲ್ಲಿ ಸುಮಾರು 300 ಜನರು ಕೆಲಸಕ್ಕೆ ಬರುತ್ತೇವೆಂದು ಹೇಳಿದರೂ ಅಧಿಕಾರಿಯೂ ಅದನ್ನು ಸೂಪರ್‌ವೈಜ್ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಕೆಲಸ ಕೊಡುವುದಕ್ಕಾಗುವುದಿಲ್ಲ ಎಂದು ಬಂದಿದ್ದ ಕೂಲಿಗಳನ್ನು ವಾಪಸು ಕಳಿಸಿದರು. ಆದುದರಿಂದ ಜಾಸ್ತಿ ಟೆಕ್ನಿಕಲ್ ಸಿಬ್ಬಂದಿಯನ್ನು ನೇಮಕ ಮಾಡಿ ಸಾಯಿಲ್ ಕನ್‌ಸರ್ವೇಷನ್ ಕೆಲಸ ಆಗಬೇಕಾಗಿರುವ ಕಡೆ ಹೆಚ್ಚು ಕೆಲಸ ಮಾಡಿಸುವಂತೆ ವ್ಯವಸ್ಥೆ ಮಾಡಬೇಕು.

ಆಹಾರದ ಬಗ್ಗೆ ಹೇಳುವುದಾದರೆ ಇವೊತ್ತು ಕೊಡುತ್ತಿರುವುದು ಏನೇನೂ ಸಾಲದು. ಅದರಲ್ಲಿಯೂ ಹಳ್ಳಿಯಲ್ಲಿರುವ ರೈತನಿಗೆ ಯಾವುದೇ ವಿಧವಾದ ಪ್ರಯೋಜನವೂ ಈಗ ಕೊಡುತ್ತಿರುವ ಆಹಾರದಿಂದ ಆಗುತ್ತಿಲ್ಲ. ವಿದ್ಯಾವಂತರಾಗಿರುವವರಿಗೆ, ಪಟ್ಟಣಗಳಲ್ಲಿ ಇರುವವರಿಗೆ ಸ್ವಲ್ಪ ಮಟ್ಟಿಗಾದರೂ ಕೊಟ್ಟು ಅವರನ್ನು ತೃಪ್ತಿಪಡಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆಯೇ ವಿನಾ ಯಾವ ರೈತ ಬೆಳೆದು, ಈ ದೇಶದಲ್ಲಿರುವ ಪ್ರಜೆಗಳಿಗೆ ಕೊಡುತ್ತಿದ್ದಾನೆ ಅವನು ಇವೊತ್ತು ಕಷ್ಟಕ್ಕೆ ಸಿಕ್ಕಿದ್ದಾನೆ. ಅವನಿಗೆ ಯಾವುದೇ ವಿಧವಾದ ಪರಿಹಾರವನ್ನೂ ಕೊಡುತ್ತಿಲ್ಲ. ತುಮಕೂರು ಜಿಲ್ಲೆಯ ಉದಾಹರಣೆಯನ್ನು ಕೊಡುವುದಾದರೆ, 1965-66ರಲ್ಲಿ ಬರೀ ಅಭಾವ ಪರಿಸ್ಥಿತಿ ಮಾತ್ರ ಇದ್ದಂಥ ಕಾಲದಲ್ಲಿ ಒಂದು ತಿಂಗಳಿಗೆ 50-60 ಸಾವಿರ ಪಲ್ಲ ಧಾನ್ಯವನ್ನು ಕೊಡುತ್ತಿದ್ದರು. ಈಗ ಕ್ಷಾಮ ಪರಿಸ್ಥಿತಿ ಇರುವಾಗ ಐದಾರು ಸಾವಿರ ಪಲ್ಲ ಧಾನ್ಯವನ್ನು ಕೊಟ್ಟರೆ ಯಾರಿಗೆ ಕೊಡಲು ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ತುರುವೇಕೆರೆ ತಾಲ್ಲೂಕಿನ ಬಗ್ಗೆ

ಹೇಳುವುದಾದರೆ ಅಲ್ಲಿ 244 ಹಳ್ಳಿಗಳಿವೆ. 180 ಹಳ್ಳಿಗಳಲ್ಲಿ ಬಾವಿಗಳಲ್ಲಿ ನೀರಿಲ್ಲ, ಬಾವಿಗಳನ್ನು ಆಳಪಡಿಸುವುದಕ್ಕೆ ಸಾಧ್ಯವಿಲ್ಲದೆ ಇರುವ ಪರಿಸ್ಥಿತಿ ಇದೆ. ಏನನ್ನೂ ಕೊಡದೆ ಇದ್ದರೂ ಜನತೆಗೆ ಮತ್ತು ದನಕರುಗಳಿಗೆ ಕುಡಿಯುವ ನೀರನ್ನು ಕೊಟ್ಟರೆ ಸ್ವಲ್ಪಮಟ್ಟಿಗಾದರೂ ಪರಿಸ್ಥಿತಿ ಸುಧಾರಿಸುತ್ತದೆ. ಆದಷ್ಟು ಜಾಗ್ರತೆ ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ಆದೇಶವನ್ನು ಕೊಟ್ಟು ಕುಡಿಯುವ ನೀರಿನ ಬಗ್ಗೆ ಸ್ವಲ್ಪ ವ್ಯವಸ್ಥೆ ಮಾಡಬೇಕು.

ನಮ್ಮಲ್ಲಿರುವ ದನಕರುಗಳನ್ನು ಸಾಕಬೇಕಾದಂಥ ಪರಿಸ್ಥಿತಿ ಬಂದಿದೆ. ಮನುಷ್ಯನಿಗೆ ಆಹಾರ ಎಷ್ಟು ಮುಖ್ಯವೋ ದನಗಳಿಗೂ ಅಷ್ಟೇ ಮುಖ್ಯ. ಅದನ್ನು ಒದಗಿಸಬೇಕಾದ್ದು ನಮ್ಮ ಕರ್ತವ್ಯ. ಸರ್ಕಾರದವರೇ ದನಗಳಿಗೆ ಮೇವನ್ನು ಒದಗಿಸುವುದು ಸ್ವಲ್ಪ ಕಷ್ಟವಾಗಬಹುದು. ಆದ್ದರಿಂದ ತಕಾವಿ ಸಾಲ ಮತ್ತು ಭೂ ಅಭಿವೃದ್ಧಿ ಸಾಲವನ್ನು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಕೊಟ್ಟರೆ ರೈತನಿಗೆ ಸ್ವಲ್ಪ ಅನುಕೂಲವಾಗುತ್ತದೆ.

'ಫ್ರೀ ಗಿಫ್ಟ್ ಫೀಡ್' ಎಂದು ಬಂದಿರುವುದನ್ನು ಅನೇಕ ಹಳ್ಳಿಗಳಿಗೆ ಹಂಚುವುದಕ್ಕಾಗಿ ಕೊಟ್ಟಿದ್ದಾರೆ. ಅದನ್ನು ಹಂಚುವಾಗ ಯಾರು ಕಷ್ಟದಲ್ಲಿದ್ದಾರೆ, ಯಾರು ಜೀವನ ಮಾಡಲು ಕಷ್ಟ ಪಡುತ್ತಿದ್ದಾರೆ ಅಂಥವರಿಗೆ ಕೊಡಿ ಎಂದರೆ ಅವನು ಅರ್ಜಿ ಬರೆದು ತಹಸೀಲ್ದಾರರಿಗೆ ಕೊಟ್ಟು, ಅವರಿಂದ ರೆವಿನ್ಯೂ ಇನ್‌ಸ್ಪೆಕ್ಟರಿಗೆ ತೆಗೆದುಕೊಂಡು ಬಂದು ಆಹಾರವನ್ನು ತೆಗೆದುಕೊಂಡು ಹೋಗು ಎಂದು ಹೇಳುತ್ತಾರೆ. ಇದು ನಿಜವಾಗಿಯೂ ಅನ್ಯಾಯ. ಗ್ರಾಮ ಪಂಚಾಯಿತಿ ಅಧಿಕಾರಿಗಳು ಅಥವಾ ಅದಕ್ಕೆ ಸಂಬಂಧಪಟ್ಟ ಯಾರೇ ಆಗಲಿ ಸರ್ಟಿಫಿಕೇಟನ್ನು ಕೊಟ್ಟರೆ ರೆವಿನ್ಯೂ ಇನ್‌ಸ್ಪೆಕ್ಟರ್ 'ಫ್ರೀ ಗಿಫ್ಟ್' ಕೊಡುವಂಥ ವ್ಯವಸ್ಥೆ ಮಾಡಬೇಕು.

ತುಮಕೂರು ಜಿಲ್ಲೆಯಲ್ಲಿ ಎರಡು ಸಾವಿರ ಬಾವಿಗಳಿಗೆ ಪಂಪ್‌ಸೆಟ್‌ಗೆ ಅರ್ಜಿಕೊಟ್ಟು ಪವರ್ ಕೊಡಿ ಎಂದು ಕೇಳಿದರೆ—ಸರ್ಕಾರ ತಾನು ಹಿಂದೆ ಮಾಡಿದ್ದ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದರೂ—ವಿದ್ಯುಚ್ಛಕ್ತಿ ಮಂಡಲಿಯವರು 800 ಸೆಟ್‌ಗಳಿಗೆ ಮಾತ್ರ ಪವರ್ ಕೊಡುತ್ತೇವೆ, ಬಾಕಿಯದಕ್ಕೆ ಕೊಡಲು ದುಡ್ಡಿಲ್ಲ ಎಂದು ಹೇಳುತ್ತಾರೆ. ಯಾರು ಪವರ್ ಕೇಳಿದರೂ ಕೂಡ ಅದರಿಂದ ಸ್ವಲ್ಪಮಟ್ಟಿಗೆ ಬೆಳೆ ಜಾಸ್ತಿ ಬೆಳೆಯುವ ಹಾಗೆ ಇದ್ದರೆ ಅಂಥವರೆಲ್ಲರಿಗೂ ಯಾವುದೇ ವಿಧವಾದ ಅಡ್ಡಿಯನ್ನುಂಟುಮಾಡದೆ ಪವರ್ ಒದಗಿಸಬೇಕು.

ಈಗಾಗಲೇ ಪ್ರಾರಂಭವಾಗಿರುವ ಪರಿಹಾರ ಕಾಮಗಾರಿಗಳೇನಿವೆ ಅವನ್ನೆಲ್ಲ ರೈತನಾದವನು ಪುನಃ ಚೇತರಿಸಿಕೊಳ್ಳುವ ತನಕ ನಿಲ್ಲಿಸಬಾರದು ಎನ್ನುವ ಆದೇಶವನ್ನು ಸರ್ಕಾರದವರು ಕೊಡಬೇಕು. ಕಂದಾಯ ಮಾಫಿ ಮಾಡುವ ವಿಚಾರದಲ್ಲಿ ಅಥವಾ ಕಂದಾಯವನ್ನು ವಸೂಲು ಮಾಡುವುದನ್ನು ಮುಂದೂಡುವ ವಿಚಾರದಲ್ಲಿ ತುಮಕೂರು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಇದುವರೆಗೂ ಒಂದು ನೋಟಿಫಿಕೇಷನ್ ಸಹ ಹೊರಟಿಲ್ಲ. ಧಾರವಾಡ, ಬೆಳಗಾಂ, ಬಿಜಾಪುರ ಇಂಥ ಕಡೆಗಳಿಗೆ ಮಾಡಿದ್ದಾರೆಯೇ ವಿನಾ ಇತರ ಕಡೆಗಳಿಗೆ ಮಾಡಿಲ್ಲ. ಸರ್ಕಾರ ಈಗಲಾದರೂ ಕೂಡ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು ರೈತನಿಂದ ಬಾಕಿ ಇರುವ ಕಂದಾಯದ ವಸೂಲಿಯನ್ನು ತಾತ್ಕಾಲಿಕವಾಗಿ ಮುಂದೂಡುವಂತೆ ಮಾಡಬೇಕು. ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಕಂದಾಯವನ್ನು ಪೂರ್ಣವಾಗಿ ಮನ್ನಾ ಮಾಡಿದರೆ ಬಹಳ ಸಂತೋಷ. ನಾಲ್ಕು ವರ್ಷದಿಂದ ತನ್ನ ಜೀವನವನ್ನೇ ನಡೆಸುವುದಕ್ಕೆ ಶಕ್ತಿ ಇಲ್ಲದೇ ಇರುವ ರೈತ ಮುಂದಿನ ವರ್ಷ ಐದು ವರ್ಷಗಳ ಕಂದಾಯವನ್ನು ಕೊಡುವುದಕ್ಕೆ ಆತನಿಗೆ ಬಹಳ ಹೊರೆಯಾಗುತ್ತದೆ. ಈ ವಿಚಾರವನ್ನು ಸರ್ಕಾರ ಪರಿಶೀಲನೆ ಮಾಡಬೇಕು.

ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ಹೇರಿ ಆದಷ್ಟು ಜಾಸ್ತಿಯಾಗಿ ಹಣವನ್ನು ಪರಿಹಾರ ಕಾರ್ಯಗಳಿಗಾಗಿ ಒದಗಿಸದೆ ಇದ್ದರೆ ಬಹಳ ಕಷ್ಟವಾಗುತ್ತದೆ. ಅದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಬಾವಿಗಳನ್ನು ಆಳಪಡಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಅನೇಕ ಜನ ಸ್ನೇಹಿತರು ಹೇಳಿದರು. ವ್ಯವಸಾಯ ಇಲಾಖೆಯಲ್ಲಿ ಬೋರಿಂಗ್ ಯಂತ್ರಗಳಿವೆ. ಅವು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಹೊಸದಾಗಿ ಯಂತ್ರಗಳನ್ನು ತರಿಸುವುದಕ್ಕಾಗಿ 23 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳುತ್ತಾರೆ. ಹೊಸ ಯಂತ್ರಗಳನ್ನು ತಂದು ಉಪಯೋಗ ಮಾಡುವುದು ಎರಡನೇ ಪ್ರಶ್ನೆ. ವ್ಯವಸಾಯ ಇಲಾಖೆಯಲ್ಲಿರತಕ್ಕ ಯಂತ್ರಗಳು ಸಮರ್ಪಕವಾಗಿ ಕೆಲಸ ಮಾಡುತ್ತ ಇವೆಯೇ ಇಲ್ಲವೇ ಎನ್ನುವುದನ್ನು ಸರ್ಕಾರ ನೋಡಬೇಕು. ಕಡಬ ಎಂಬ ಊರಿನಲ್ಲಿ ಒಂದು ಬೋರಿಂಗ್ ಯಂತ್ರ ಕೆಲಸ ಮಾಡುತ್ತಿದ್ದು ಅದು ಒಂದು ತಿಂಗಳಿನಿಂದ ಕೆಲಸ ಮಾಡದೆ ಇದೆ. ಅದಕ್ಕೆ ಬೇಕಾದ ಕೆಲವು ಸಾಮಾನುಗಳು ಇನ್ನೂ ಬಂದಿಲ್ಲ. ಹೆಬ್ಬಾಳ ಫಾರಂನಲ್ಲಿ ಅನೇಕ

(ಶ್ರೀ ಎಂ. ಎನ್. ರಾಮಣ್ಣ)

ಬೋರಿಂಗ್ ಯಂತ್ರಗಳಿವೆ. ಅವುಗಳನ್ನು ಕೊಡಿರಿ ಎಂದು ಎಷ್ಟೋ ಸಲ ಕೇಳಿದ್ದೇವೆ. ಈ ರೀತಿಯಾಗಿ ವ್ಯವಸಾಯ ಇಲಾಖೆಯಲ್ಲಿ ಮತ್ತು ಇತರ ಕಡೆ ಇರುವ ಬೋರಿಂಗ್ ಯಂತ್ರಗಳನ್ನು ಪೂರ್ಣವಾಗಿ ಉಪಯೋಗ ಮಾಡಿ ಆದಷ್ಟು ಜಾಗ್ರತೆ ಕಷ್ಟವಲ್ಲಿರುವ ರೈತನಿಗೆ ಸಹಾಯವನ್ನು ಒದಗಿಸುವುದಲ್ಲದೆ ತುಮಕೂರು ಜಿಲ್ಲೆಯನ್ನು ಕ್ಷಾಮ ಪ್ರದೇಶವೆಂದು ಸರ್ಕಾರ ಸಾರಬೇಕು ಎಂದು ಪ್ರಾರ್ಥನೆ ಮಾಡಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—Before I call upon other members to speak, I would like to inform the hon'ble House that discussion on this subject will continue up to 7-00 P.M.

Sri S. S. SHETTAR.—Sir, the Central Study Team has given its opinion after examining the scarcity conditions in Mysore State and that is a very important document. Without going through that document we are not able to know what the real picture in the State is. They have mentioned two categories *viz.*, seriously-affected area and not so seriously-affected area. Many members have said that their area has not been properly examined and that their area which ought to have been declared as a drought-affected area has not been so declared. So, my submission is that the opinion given by the Central Study Team should be supplied to us tomorrow so as to facilitate discussion of this subject.

SEVERAL MEMBERS.—The discussion may be continued tomorrow.

Mr. DEPUTY SPEAKER.—The House now stands adjourned to meet tomorrow at 1-00 P.M.

The House adjourned at Six of the Clock to meet again at One of the Clock on Thursday the 5th September 1968.

WD 11210—GPB—600—11-10-1968